ಜುಲೈ-2013


ಕಲ್ಯಾಣ ಕಿರಣ

ಬೆಲೆ-20/-





ವಿಶ್ವಗುರು ಬಸವಣ್ಣನವರ ಐಕ್ಯ ಕ್ಷೇತ್ರ ಕೂಡಲ ಸಂಗಮದಲ್ಲಿ ನಿರ್ಮಾಣವಾಗಲಿರುವ
ಪರಮ ಪೂಜ್ಯ ಶ್ರೀ ಮಹಾ ಜಗದ್ಗುರು ಲಿಂಗಾನಂದ ಸ್ವಾಮೀಜಿಯವರ
63 ಅಡಿ ಪುತ್ಥಳಿ



ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳ 63 ಅಡಿ ಎತ್ತರದ ಪುತ್ಥಳಿಯ ನಿರ್ಮಾಣಕ್ಕೆ
ಪೂಜ್ಯ ಮಾತಾಜಿಯವರಿಂದ ನಾಂದೀ ಪೂಜೆ



ಪೂಜ್ಯ ಲಿಂಗಾನಂದ ಸ್ವಾಮಿಗಳ ಲಿಂಗೈಕ್ಯ ಸಂಸ್ಮರಣೆಯಂದು ಗುರುವಂದನೆ ಮತ್ತು ಪುಷ್ಪವೃಷ್ಟಿ



ಪೂಜ್ಯ ಶ್ರೀ ಜಗದ್ಗುರು ಬಸವಜಯ ಮೃತ್ಯುಂಜಯ ಸ್ವಾಮಿಗಳಿಂದ ಸಂಸ್ಮರಣೆ ಕಾರ್ಯಕ್ರಮದ
ಉದ್ಘಾಟನೆ

ಹೇ.........ರುದ್ರಕನ್ಯೆ

ಹೇ......... ರುದ್ರ ಕನ್ಯೆ ಹೇ......... ರುದ್ರ ಕನ್ಯೆ
ಯಾರೊಡನೆ ಈ ಕಲಹ, ಏತಕಾಗಿ ಈ ಮೊರೆತ?
ಮರೆಯುತಿಹೆ ನಿನ್ನ ನೀ ಮೊರೆವ ಆರ್ಭಟದೊಳಗೆ ॥
ಹರನ ತೊಡೆನೇರಿನಿಂದ ಗೌರಿಯೊಡನೆ ಕಲಹವೇ ?
ಶಿರಮುಕುಟದಿ ಮೆರೆವ ನಿನಗೆ ಸವತಿಯ ಮತ್ಸರವೇಕೆ ?
ಪ್ರಕೃತಿಯು ಗುಡುಗುಡಿಸಿ ಪವನನೊಡನೆ ಸಹಕರಿಸೆ
ಸುಕೃತರೂಪಿ ನೀರೆ ನೀನುದಿಸಿಬರುವೆ ಅವನಿತಳಕೆ ॥
ಪರ್ವತರಾಜ ಕುವರಿಯಾ ಗರ್ವದಿಂದ ತೆಗಳುತಿಹೆ
ಸರ್ವರೌದ್ರವಕೊಂಡು ಭೈರವಿಯಾ ತೆರದಲಿ॥
ಅವಳ ಮುಡಿಯನ್ನಿಡಿದು ತರಿದೆ ತರತರದಾ ತರುವ ಕೊಂಡು
ಅವಳ ಒಡಲನಪ್ಪಳಿಸುತಾ ತೆವಳಿ ನಿನ್ನ ಮಡಿಲಿನೊಳಗೆ
ಸವೆದು ಉರುಳುವಂತೆ ಮಾಡ್ವೆ ನೀರೆ ಏನಿದೀ ರೌದ್ರ
ಪಿತನೊಡನೆ ಜಗಳವೆಂದು ಸುತೆಯೆ ನೀನು ತೆರಳುತಿಹೆ
ಪತಿ ಮನೆಗೆ ಭರದಿಂದ ಜೊತೆಯೊಳಗೆ ಕಲಹ ದೂರನ್ನೊತ್ತು

ಗೌರಿಯೊಡನೆ ವಿರಸವಾಗೆ ಕಾರುತಿಹೆಯ ಮೊರೆವ ಹೂಂಕಾರ
ಮೋರೆಯೊಳೇಕೆ ಇಂಥಾ ರೌದ್ರ ನೀರೆ ತೋರೆ ನಸು ನಗೆಯ ಮೊಗವ
ಗಿರಿಯ ಮುಡಿಯನಿಳಿದು ನಿಂದು ಋಷಿಕೇಶದಿ ಮೊರೆದು ನಿಂದು
ಹರಿವ ಒಯ್ಯಾರವ ತೋರಿ ಬಯಲಿನೊಳಗೆ ಮೆರೆದು ಮೆರೆದು ॥
ರೌದ್ರವೇಕೆ ಹೇ ಭದ್ರೆ ! ಸುಮುದ್ರೆಯಿರಲಿ ಮೋರೆಯೊಳು
ಕ್ಷುದ್ರ ಕಲಹವನುಳಿದು ಭಾಮೆ ಛಿದ್ರ ಮನವನುಳಿದು ನೀನು ॥
ಪ್ರಕೃತಿ ಶಕ್ತಿ ಮೆರೆಯುತಿರಲು ಹಿರಿಯಳೆಂಬಾರ್ಭಟವ ಬಿಡು
ವಿಕೃತ ರೂಪವಂ ತೊರೆದು ನಸುನಗೆಯಿಂ ಪ್ರಿಯನ ಬಳಿಗೆ
ತೆರತೆರಳು ನೀರೆ ಗಂಗಾ....... ಉತ್ತುಂಗ ಶೃಂಗ ದ್ವಯದ ಮಧ್ಯೆ
ಹೊರಹೊರಳಿ ಉರಗ ತೆರದಿ ನರ್ತಿಸುತ ಸಚ್ಚಿದಾನಂದಿ ಶರಧಿ ಎಡೆಗೆ.

– ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ

(25–7–1966ರಂದು ವಿಪರೀತ ಪ್ರವಾಹ ಗಂಗಾನದಿಯಲ್ಲಿ ಬಂದಾಗ ಸಂಜೆ 6–30ಕ್ಕೆ ನೋಡಲಿಕ್ಕೆಂದು ಋಷಿಕೇಶದ ಲಕ್ಷ್ಮಣ ಝೂಲಾಕ್ಕೆ ಹೋಗಿದ್ದೆ. ಆಗ ಪ್ರವಾಹದ ಆರ್ಭಟ ಕಂಡು ಪ್ರಕೃತಿ–ಗಂಗೆಯ ಸವತಿ ಮತ್ಸರದ ಕಲ್ಪನೆ ಬಂದಿತು, ಆಗ ಬರೆದ ಕವನ.)

ಈ ವರ್ಷ 818ನೆಯ ಬಸವ ಪಂಚಮಿಯು ದೇವ(ಭಾನು)ವಾರ ದಿನಾಂಕ 11–8–2013ರಂದು ಒದಗಿ ಬಂದಿದೆ.

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ಸಂಪುಟ-44 ಬಸವ ಶಕೆ -879 ಪಂಚ ವಾರ್ಷಿಕ ಸದಸ್ಯತ್ವ 1000 ರೂ.
ಸಂಚಿಕೆ-7 ಜುಲೈ-2013 ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಲೇಖನಗಳು	ಲೇಖಕರು	ಪುಟ
1. ಹೇ...... ರುದ್ರ ಕನ್ಯೆ	ಮಾತಾಜಿ	1
2. ವಿಶ್ವಗುರು ಬಸವಣ್ಣನವರ 818ನೆಯ ಲಿಂಗೈಕ್ಯ ಸಂಸ್ಮರಣೆ	–	3
3. ಬಸವ ವಚನಾಮೃತ-ಭಾಗ 54	ಮಾತಾಜಿ	5
4. ಬಾಗಲಕೋಟ ರಾಷ್ಟ್ರೀಯ ಬಸವ ದಳದ ವಾರ್ಷಿಕೋತ್ಸವ	--	24
5 ಪುಣೆಯಲ್ಲಿ ಮಾತಾಜಿಯವರಿಗೆ ಅಭಿನಂದನೆ-ವರದಿ	--	25
6. ಕೂಡಲಸಂಗಮದಲ್ಲಿ ತರಬೇತಿ ಶಿಬಿರ-ವರದಿ	ಚಂದ್ರಶೇಖರ್	26
7. ಕಪಿಲಸಿದ್ಧಮಲ್ಲಿಕಾರ್ಜುನದೇವರದೇವ ವಚನಾಂಕಿತ	ಸಚ್ಚಿದಾನಂದ ಚಟ್ನಳ್ಳಿ	28

ಆಗಸ್ಟ್-ಸೆಪ್ಟಂಬರ್-ಅಕ್ಟೋಬರ್ ತಿಂಗಳಿನ ಹಬ್ಬ ಹುಣ್ಣಿಮೆ-ಉತ್ಸವ

ಬಸವ ಪಂಚಮಿ 11-8-2-13

ನೀಲಮ್ಮ ಷಷ್ಠಿ 12-8-2013

ಬಸವ ಜ್ಯೋತಿ ಪ್ರಾರಂಭೋತ್ಸವ 7-8-2013

ಬಸವ ಜ್ಯೋತಿ ಸಮಾರೋಪ 9-9-2013

ಪೂಜ್ಯ ಲಿಂಗಾನಂದ ಸ್ವಾಮಿಗಳ ಜಯಂತಿ 9-9-2013

12ನೆಯ ಕಲ್ಯಾಣ ಪರ್ವ ಅಕ್ಟೋಬರ್ 16, 17ಮತ್ತು 18ರಂದು

ಕಲ್ಯಾಣ ಕಿರಣ ಚಂದಾ

ಕಲ್ಯಾಣ ಕಿರಣದ ವಾರ್ಷಿಕ ಚಂದಾ 200ರೂ. ಪಂಚವಾರ್ಷಿಕ ಚಂದಾ 1000ರೂ. ಕಳಿಸಬೇಕು ಎನ್ನುವವರು ಎಂ.ಓ. ಮೂಲಕ, ಬ್ಯಾಂಕ್ ಡ್ರಾಫ್ಟ್ ಮೂಲಕ ಕಳಿಸಬಹುದು. ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ಹೆಸರಿಗೆ ಡಿ.ಡಿ. ತೆಗೆಸಬೇಕು. ಹಣ Transfer ಮಾಡುವವರು Bank of India, Rajajinagar, Bangalore-560010ದ Viswakalyan Mission Charitable Trust ದ ಖಾತೆಗೆ ನೇರವಾಗಿ ವರ್ಗಾಯಿಸಬಹುದು. NEFT ಮೂಲಕ ಬೇರೆ ಬ್ಯಾಂಕಿನಿಂದ ಕಳಿಸುವವರಿಗೆ IFSC : BK ID 0008406 ವರ್ಗಾವಣೆ ಮಾಡಿದ ನಂತರ ವಿವರಗಳನ್ನು ಫೋನ್ ಮೂಲಕ ಅಥವಾ ಪತ್ರದ ಮೂಲಕ ತಿಳಿಸಬೇಕು.


ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ, 2035, 20ನೇ ಮೇನ್, ರಾಜಾಜಿನಗರ 2ನೇ ಬ್ಲಾಕ್
ಬೆಂಗಳೂರು-560010
ದೂರವಾಣಿ : 080-23131476 / 9945806297

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-560010. Phone : 080-23131476, Send SMS to 9945806297/ 9738028585/ 8892912123
Email :- kalyanakirana1970@gmail.com

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

866666

ವಿಶ್ವಗುರು ಬಸವಣ್ಣನವರ 818 ನೆಯ ಲಿಂಗೈಕ್ಯ ಸಂಸ್ಮರಣೆ



ಸೋಮ(ಶಿವ)ವಾರ, ದಿ. 12-08-2013 ರಂದು ಬೆಳಿಗ್ಗೆ 10-30

ಬೆಂಗಳೂರು ನಗರದ

ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ

ಸರ್ ಕೆ.ಪಿ.ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ

(ಟೌನ್ ಹಾಲ್)

❋ ಶರಣರ ಬರುವೆಮಗೆ ಪ್ರಾಣ ಜೀವಾಳ ❋

ವಿಶ್ವಗುರು ಬಸವಣ್ಣನವರ ಮತ್ತು ದಾಸೋಹ ಮೂರ್ತಿ ನೀಲಾಂಬಿಕಾ ತಾಯಿಯವರ 818ನೆಯ ಲಿಂಗೈಕ್ಯ ಸಂಸ್ಮರಣೆ

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ,

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (30–4–1134) 62 ವರ್ಷ 3 ತಿಂಗಳು 2 ದಿವಸಗಳ ಈ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಬಸವ(ಮಂಗಳ)ವಾರದಂದು ದಿ.30–7–1196ರಂದು, ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆದ ನದಿಯಂತೆ ಲಿಂಗೈಕ್ಯರಾಗಿ ಲಿಂಗದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು "ಬಸವ ಪಂಚಮಿ" ಎಂದು ಖ್ಯಾತಿವೆತ್ತಿದೆ. ಈ ವರ್ಷ 818ನೆಯ ಲಿಂಗೈಕ್ಯ ದಿನವು ದೇವ(ಭಾನು)ವಾರ ದಿ.11–8–2013ರಂದು ಒದಗಿ ಬಂದಿದೆ.

ನಾವು ಪ್ರತಿವರ್ಷವು ಬಸವ ಪಂಚಮಿಯನ್ನು ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಪ್ರದೇಶದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಮಾಡುತ್ತೇವೆ. ಈ ವರ್ಷ ಭಾನುವಾರದಂದೇ ಶ್ರಾವಣಶುದ್ಧ ಪಂಚಮಿ ಬಂದಿರುವುದರಿಂದ ಟೌನ್ ಹಾಲ್ ಬಾಡಿಗೆಗೆ ಸಿಗುತ್ತಲಿಲ್ಲ. ಬೇರೆ ಯಾವುದೇ ಹಾಲ್ ಸಹ ಸಿಗುತ್ತಲಿಲ್ಲ. ಪೆಂಡಾಲ್ ಹಾಕಿ ಮಾಡಲು ಮಳೆಗಾಲವಾದ್ದರಿಂದ ಸಾಧ್ಯವಿಲ್ಲ. ಅದಕ್ಕಾಗಿ ದಿ.11–8–2013ರಂದು ಸಂಕ್ಷಿಪ್ತವಾಗಿ ಬಸವ ಮಂಟಪದಲ್ಲಿ ಬಸವ ಪಂಚಮಿ ಆಚರಿಸಿ ಸೋಮ(ಶಿವ)ವಾರದಂದು ದಿ.12–8–2013ರಂದು ವಿಶೇಷವಾಗಿ ಬಸವ ಲಿಂಗೈಕ್ಯ ಸಂಸ್ಮರಣೆಯನ್ನು ಸರ್. ಕೆ.ಪಿ.ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ಆಚರಿಸುತ್ತಲಿದ್ದೇವೆ.

ಆದಿ ಪ್ರಮಥ, ಗಣಾಧಿಪತಿ ಬಸವಣ್ಣನವರು ಲಿಂಗೈಕ್ಯರಾದ ಮರುದಿವಸ ದಾಸೋಹಮೂರ್ತಿ ನೀಲಾಂಬಿಕಾ ತಾಯಿಯವರು ಸಹ ಉರಿಯುಂಡ ಕರ್ಪುರದಂತೆ ಲಿಂಗೈಕ್ಯರಾದರು. ಅವರ ಲಿಂಗೈಕ್ಯ ಸಂಸ್ಮರಣೆಯನ್ನು ಬಸವ(ಮಂಗಳ)ವಾರ ದಿ.13–8–2013ರಂದು ಬೆಳಿಗ್ಗೆ 10–30ಗಂಟೆಗೆ ರಾಜಾಜಿನಗರದ 20ನೆಯ ಮುಖ್ಯರಸ್ತೆಯಲ್ಲಿರುವ ಬಸವ ಮಂಟಪದಲ್ಲಿ (ಸಿಟಿ ಆಸ್ಪತ್ರೆ ಪಕ್ಕ) ಸಾಮೂಹಿಕ ಇಷ್ಟಲಿಂಗಪೂಜೆಯೊಡನೆ ನೀಲಾಂಬಿಕಾ ಷಷ್ಠಿಯನ್ನು ಆಚರಿಸಲಾಗುವುದು. ಪೂಜಾ ಸಾಮಗ್ರಿಗಳೊಡನೆ ಶರಣ ಶರಣೆಯರು ಬಂದು ಭಾಗವಹಿಸಬೇಕು.

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಕೂಡಲ ಸಂಗಮದ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಈ ಮೂರು ದಿವಸಗಳ (11–12 ಮತ್ತು 13–8–2013)ಕಾರ್ಯಕ್ರಮವನ್ನು, ಉಪನ್ಯಾಸ ಮತ್ತು ನಂತರ ಗಣಪ್ರಸಾದ(ಭೋಜನ)ವನ್ನು ವ್ಯವಸ್ಥೆ ಮಾಡಿದೆ. ಆದ್ದರಿಂದ ಎಲ್ಲ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದೇ ಅಲ್ಲದೆ ತನು–ಮನ–ಧನಗಳಿಂದ ಸಹಕರಿಸಿ ಕಾರ್ಯಕ್ರಮ ವ್ಯವಸ್ಥೆ ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ವಿನಂತಿಸುತ್ತೇವೆ.

ಸರ್ವರಿಗೂ ಆದರದ ಸುಸ್ವಾಗತ

ಎನ್. ಪುಟ್ಟರುದ್ರ, ಗೌರವಾಧ್ಯಕ್ಷರು	ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು
ಲಿಂಗಾಯತ ಧರ್ಮ ಮಹಾಸಭಾ	ಪ್ರಧಾನ ಕಾರ್ಯದರ್ಶಿ, ಬಸವ ಮಂಟಪ

ದಿ. 12–8–2013ರ ಕಾರ್ಯಕ್ರಮ ವಿವರ

ಬೆಂಗಳೂರು ನಗರದ ಸಿಟಿ ಮಾರುಕಟ್ಟೆ ಸಮೀಪದಲ್ಲಿರುವ ಸರ್.ಕೆ.ಪಿ.ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ ವಿಶ್ವಕಲ್ಯಾಣ ಮಿಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ 818ನೆಯ ಬಸವ ಪಂಚಮಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

1. ಬೆಳಿಗ್ಗೆ 10–30 ಗಂಟೆಗೆ ಕಾರ್ಯಕ್ರಮ ಆರಂಭ.
2. ಕಾರ್ಯಕ್ರಮದ ನಂತರ 2 ಗಂಟೆಗೆ ಗಣದಾಸೋಹ (ಊಟ).
3. ಸಾಂಸ್ಕೃತಿಕ ಕಾರ್ಯಕ್ರಮ 3–30. ಕುಮಾರಿಯರಾದ ಸ್ವಾತಿ ಮತ್ತು ಶ್ರುತಿ, ಚೈತ್ರಾ, ನಿಸರ್ಗಾ, ಬಸವಶ್ರೀ, ವಚನ ಅವರಿಂದ ನೃತ್ಯ. ಶರಣೆ.ಭಾಗ್ಯಮ್ಮ ತಿಪ್ಪೇಸ್ವಾಮಿ ಅವರ ನಿರ್ದೇಶನದಲ್ಲಿ 35ಜನ ಶರಣೆಯರ ಪರಿಚಯದ ಭಕ್ತಿ ವೈಭವ ರೂಪಕ.

ಭಾಗ–54

ಬಸವ ವಚನಾಮೃತ

- ಮಾತಾಜಿ

1209. ಸುಮನಸ್ಸೇ ಅಡುಗೆ (ಬೋನ)

ದೇವ ದೇವ ಮಹಾಪ್ರಸಾದ, ಅವಧರಿಸಯ್ಯಾ ಎನ್ನ ಬಿನ್ನಹವ
ಅತಳ, ವಿತಳ, ಸುತಳ, ರಸಾತಳ, ತಳಾತಳ,
ಮಹಾತಳ, ಪಾತಾಳಾದಿ ಲೋಕದಿಂದತ್ತತ್ತ ನಿಮ್ಮ ಶ್ರೀ ಚರಣ.
ಭೂಲೋಕ, ಭುವರ್ಲೋಕ, ಸ್ವರ್ಗಲೋಕ, ಮಹರ್ಲೋಕ,
ಜನರ್ಲೋಕ, ತಪೋಲೋಕ, ಸತ್ಯಲೋಕದಿಂದತ್ತತ್ತ
ನಿಮ್ಮ ಉತ್ತಮಾಂಗ.
ತರುವಿನೊಳಗೆ ಅನಲ ಭರಿತನಾಗಿರ್ದು
ಮಥನದಿಂದ ತೋರಿ ಆಹುತಿಗೊಂಬಂತೆ
ಸರ್ವಕರ್ತೃ ನಿತ್ಯಾನಂದಮಯನೆ, ಭಕ್ತಲೀಲಾವಿನೋದನೆ
ಲಿಂಗದೇವಾ,
ಸುಚಿತ್ತದಲ್ಲಿ ಮನಮೀಸಲಬೋನವನಾರೋಗಿಸಯ್ಯಾ.

ದೇವ ದೇವನೆ, ನಿನ್ನ ಅನುಗ್ರಹ ಎನ್ನ ಮೇಲಿರಲಿ. ನನ್ನ ವಿನಂತಿಯನ್ನು ಗಮನಿಸು. ಅತಳ, ವಿತಳ, ಸುತಳ, ರಸಾತಳ, ತಳಾತಳ, ಮಹಾತಳ, ಪಾತಾಳ –ಎಂಬ ಏಳು ಅಧೋಲೋಕಂಗಳಿಂದತ್ತತ್ತ ನಿಮ್ಮ ಶ್ರೀಚರಣ. ಭೂಲೋಕ, ಭುವರ್ಲೋಕ, ಸ್ವರ್ಗಲೋಕ, ಮಹರ್ಲೋಕ, ಜನರ್ಲೋಕ ತಪೋಲೋಕ, ಸತ್ಯಲೋಕ ಎಂಬ ಏಳು ಊರ್ಧ್ವಲೋಕದಿಂದತ್ತತ್ತ ನಿಮ್ಮ ಉತ್ತಮಾಂಗ ಅಂದರೆ ಶಿರಸ್ಸು. ಗಿಡಮರದಲ್ಲಿ ಅಗ್ನಿಯು ವ್ಯಾಪಿಸಿಕೊಂಡಿರುವಂತೆ ಪರಸ್ಪರ ಘರ್ಷಿಸಿ ಬೆಂಕಿಯು ಉತ್ಪನ್ನವಾಗುವಂತೆ, ಹಾಗೆ ಉತ್ಪತ್ತಿಯಾದ ಬೆಂಕಿಯಲ್ಲಿ ಕಟ್ಟಿಗೆಯು ಸುಟ್ಟು ಹೋಗುವಂತೆ ಸರ್ವಕರ್ತೃವೂ, ನಿತ್ಯಾನಂದ ಸ್ವರೂಪನು, ಭಕ್ತಿ ಲೀಲಾವಿನೋದನು ಆಗಿರುವ ನೀನು ನನ್ನ ಸುಚಿತ್ತದಲ್ಲಿ ಹುಟ್ಟಿದ ಸುಮನಸ್ಸೆಂಬ ಅಡುಗೆಯನ್ನು ಆರೋಗಿಸು. ಕೆಳಗೇಳು ಲೋಕ, ಮೇಲೇಳು ಲೋಕ – ಒಟ್ಟು 14 ಲೋಕಗಳಿವೆ ಎಂದು ಭಾರತೀಯ ಪುರಾಣಗಳು ವರ್ಣಿಸುತ್ತವೆ. ಗುರು ಬಸವಣ್ಣನವರ ಪ್ರಕಾರ ಇವು 14 ಸ್ತರ (levels)ಗಳು.

1210. ದೇವನಿಗೆ ಮೀಸಲಾದ ಸಯದಾನ.

ದೇವ ದೇವ ಮಹಾಪ್ರಸಾದ !
ನಿಮ್ಮಡಿಗಳೆಂದಂತೆಯಲ್ಲದೆ ಎನಗೆ ಬೇರೆ ಸ್ವತಂತ್ರವುಂಟೆ ?
ದರ್ಪಣದೊಳಗಣ ಪ್ರತಿಬಿಂಬವ ನೋಡುವ ಮುಖಕ್ಕೆ
ಭಿನ್ನಭಾವವುಂಟೆ ?
ಚರಿಸಿಬಪ್ಪ ಅನಂತ ಸುಳುಹಿನೊಳಗೆ ನೀನೊಬ್ಬನೆ,
ನಿನ್ನೊಳಗೆ ಅನಂತ ಸುಳುಹು ಅಡಗಿದವು.
ನಿಮಗೆ ಮಾಡಿದ ಸಯದಾನವ ನಿಮಗೆ ನೀಡುವೆನು
ಅವಧರಿಸಬೇಕಯ್ಯಾ, ಲಿಂಗದೇವಾ.

ಲಿಂಗದೇವನೇ, ನಿನ್ನ ಅನುಗ್ರಹ ನನ್ನ ಮೇಲಿರಲಿ. ನಿಮ್ಮ ಪಾದವು ನನಗೆ ಏನು ಆದೇಶವನ್ನು ನೀಡುವುದೋ ಅದರಂತೆ ನಾನು ನಡೆಯುತ್ತೇನಲ್ಲದೆ ನನಗೆ ಬೇರೆ ಸ್ವತಂತ್ರವಿಲ್ಲ. ಕನ್ನಡಿಯಲ್ಲಿ ಕಾಣುವ ಪ್ರತಿಬಿಂಬಕ್ಕೆ ಬೇರೆ ಅಸ್ತಿತ್ವ ಉಂಟೆ ? ನೀನು ಬಿಂಬದಂತೆ ನಾನು ಪ್ರತಿಬಿಂಬದಂತೆ. ಸಚರವಾಗಿ ಸಂಚರಿಸುವ ಅನಂತ ಸುಳುಹಿನಲ್ಲಿ ಚರಿಸುವವ ನೀನು ಒಬ್ಬನೆ. ನಿನ್ನೊಳಗೆ ಸಚರ ಮತ್ತು ಅಚರವಾದ ಎಲ್ಲವೂ ಅಡಗಿವೆ. ನನ್ನ ಬಳಿ ಇರುವುದು ನೀನು ಕೊಟ್ಟ

ಸಯದಾನ ಅಂದರೆ ಪದಾರ್ಥ. ಅದನ್ನು ಪ್ರಸಾದವಾಗಿ ಮಾಡಿ ನಿಮಗೆ ನೀಡುತ್ತೇನೆ. ನೀನು ಸ್ವೀಕರಿಸಬೇಕು.

1211. ಅತೀತವಾದ ಸಯದಾನ.

ಕಾಲ ಮುಟ್ಟಲಮ್ಮದ ಸಯದಾನ, ಕಲ್ಪಿತವಲ್ಲದ ಸಯದಾನ
ಅನಂತರತಿ ಎಂಬ ಹೆಂಗೂಸು ಮುಟ್ಟದ ಸಯದಾನ
ಭಾಳಲೋಚನನೆಂಬ ಜಂಗಮ ಮುಟ್ಟದ ಸಯದಾನ.
ಎಲ್ಲಿಯೂ ಮುಟ್ಟದ ಸಯದಾನವ ನಿಮಗರ್ಪಿಸಿದೆನು
ಆರೋಗಿಸಯ್ಯಾ ಪ್ರಭುವೆ ಲಿಂಗದೇವಾ.

ಸಾಮಾನ್ಯವಾದ ಸಯದಾನವು ಅಂದರೆ ಪದಾರ್ಥಗಳು ಕಾಲಾನುಕ್ರಮದಲ್ಲಿ ಹುಳುತು, ಕೊಳೆತು ಹೋಗುತ್ತವೆ. ಬಗೆಬಗೆಯ ಅಡಿಗೆಗಳಾಗಿ ಕಲ್ಪಿತವಾಗುತ್ತವೆ. ಆದರೆ ಗುರು ಬಸವಣ್ಣನವರೆಂಬ ಶರಣ ಸತಿ ಅರ್ಪಿಸುವ ಪದಾರ್ಥ ಕಾಲಕ್ಕತೀತ, ಕಲ್ಪನೆಗೆ ಅತೀತ. ಹಲವಾರು ಆಕಾಂಕ್ಷೆಗಳು ಎಂಬ ಅನಂತ ರತಿ ಮುಟ್ಟದಿರುವ ಪದಾರ್ಥ. ಭಾಳಲೋಚನನಾದ ಶಿವನು ಕೊಡದೆ ಇರುವ ಪರಿಕಲ್ಪನೆ. ಯಾವ ರೀತಿಯಲ್ಲೂ ಕಲಂಕಿತವಾಗದ ಶುದ್ಧ ಮನಸ್ಸಿನ ಸಿದ್ಧ ಪ್ರಸಾದವನ್ನು ಲಿಂಗದೇವಾ ನಿಮಗೆ ಅರ್ಪಿಸುತ್ತಿದ್ದೇನೆ. ಇದರ ಆರೋಗಣೆ ಮಾಡು ಎಂದು ಗುರು ಬಸವಣ್ಣನವರು ದೇವನಲ್ಲಿ ಬೇಡುತ್ತಾರೆ.

ಈ ವಚನದಿಂದ ಗ್ರಹಿಸಬೇಕಾದ ವಿಷಯಗಳು ಎರಡು 1. ಪ್ರಸಾದ ತತ್ತ್ವದ ಪರಿಕಲ್ಪನೆ(concept) ಗುರು ಬಸವಣ್ಣನವರ ಕೊಡುಗೆ. ಲಿಂಗಾಯತ ಧರ್ಮಕ್ಕೆ ಭಾಳಲೋಚನನ ಕೊಡುಗೆ. 3. ವಿಭೂತಿ, ರುದ್ರಾಕ್ಷಿ ಮತ್ತು ಮಂತ್ರ, ಗುರು ಬಸವಣ್ಣನವರ ಕೊಡುಗೆ ಗುರು–ಲಿಂಗ–ಜಂಗಮ, ಪದೋದಕ–ಪ್ರಸಾದ ಇವು 5, ಒಟ್ಟು ಎಂಟಾಗಿ ಅಷ್ಟಾವರಣಗಳಾಗಿವೆ. ಶೈವ ಧರ್ಮದ ಪ್ರಸಾದಕ್ಕೂ ಲಿಂಗಾಯತ ಧರ್ಮದ ಪ್ರಸಾದ ತತ್ತ್ವಕ್ಕೂ ತುಂಬಾ ವ್ಯತ್ಯಾಸವಿದೆ. 2. ಲಿಂಗದೇವನನ್ನು ಉದ್ದೇಶಿಸಿ ಪ್ರಭುವೇ ಎಂದು ಸಂಬೋಧಿಸಿದ ವಚನಗಳೆಲ್ಲವನ್ನೂ ಶೂನ್ಯ ಸಂಪಾದನಾಕಾರರು ಪ್ರತ್ಯೇಕಿಸಿ ಪ್ರಭುದೇವರ ಆರೋಗಣೆಯ ಪ್ರಸಂಗವನ್ನು ಸೃಷ್ಟಿಸಿ ಅಲ್ಲಮಪ್ರಭುವನ್ನು ಹೊಟ್ಟೆಬಾಕನಂತೆ ಚಿತ್ರಿಸಿದ್ದಾರೆ.

1212. ಲಿಂಗ ನೈವೇದ್ಯ

ಅರ್ಥವುಳ್ಳವರೆಲ್ಲ ಅರಸಿಂಗಂಜುವರಯ್ಯಾ,
ಭಕ್ತಿಯುಳ್ಳವರೆಲ್ಲ ಜಂಗಮಕ್ಕಂಜುವರಯ್ಯಾ
ಸೂಳೆಗೊಲಿದವರೆಲ್ಲ ಸೂಳೆಯೆಂಜಲು ತಿಂಬರಯ್ಯಾ
ಮಾಂಸವ ಮೆಚ್ಚಿದವರೆಲ್ಲ ಸೊಣಗನೆಂಜಲ ತಿಂಬರಯ್ಯಾ
ಲಿಂಗದೇವನ ಶರಣರ ಒಕ್ಕುಮಿಕ್ಕುದ
ಲಿಂಗಕ್ಕೆ ಕೊಟ್ಟುಕೊಂಡು ಯೋಗ್ಯವಾದವರ
ನಮ್ಮ ಚನ್ನಬಸವಣ್ಣ ಬಲ್ಲ.

ಹಣವು ವಿಪುಲವಾಗಿ ಇರುವ ಸಿರಿವಂತರು ರಾಜನಿಗೆ ಅಂಜುವರು. ಶ್ರೀಮಂತರನ್ನು ನೋಡಿ ರಾಜನು ಯಾವಾಗ ಬೇಕಾದರೂ ದೇಣಿಗೆ(ಚಂದಾ) ಕೇಳಬಹುದು. ದಂಡ ಹಾಕಬಹುದು. ಆದರೆ ಭಕ್ತಿವಂತರು ರಾಜನಿಗೆ ಅಂಜದೆ ಜಂಗಮಕ್ಕೆ ಅಂಜುವರು. ವೇಶ್ಯೆಯ ಸಹವಾಸ ಮಾಡಿದವರು (ಚುಂಬನದ ಮೂಲಕ) ವೇಶ್ಯೆಯ ಎಂಜಲನ್ನು ತಿನ್ನುವರು. ಮಾಂಸಾಹಾರಿಗಳು ನಾಯಿಯ ಎಂಜಲನ್ನು ತಿನ್ನುವರು. ಸತ್ತ ಪ್ರಾಣಿಗಳ ಚರ್ಮ ಬಹಳ ಬಿರುಸಾಗಿರುತ್ತದೆ. ಚಾಕು ಕತ್ತರಿ ಮುಂತಾದವು ಇಲ್ಲದಾಗ, ನಾಯಿಗಳನ್ನು ಬಿಟ್ಟು ಚರ್ಮವನ್ನು ಹರಿಸಿ ನಂತರ ಆ ನಾಯಿಗಳನ್ನು ಓಡಿಸಿ ಮಾಂಸವನ್ನು ತೆಗೆದುಕೊಳ್ಳುತ್ತಿದ್ದರು.

ಜ್ಞಾನಿಗಳು, ತಪಸ್ವಿಗಳೂ ಆದ ಶರಣರು ಕೊಡುವ, ಒಕ್ಕ ಪ್ರಸಾದ, ಮಿಕ್ಕ ಪ್ರಸಾದಗಳನ್ನು ತಮ್ಮ ಇಷ್ಟಲಿಂಗಕ್ಕೆ ಅರ್ಪಿಸಿ ಸ್ವೀಕರಿಸುವ ಪದ್ಧತಿ ಲಿಂಗಾಯತ ಧರ್ಮದಲ್ಲಿ ಇದ್ದು ಆ ರೀತಿ ಆಚರಿಸುವವರನ್ನು ಚನ್ನಬಸವಣ್ಣನವರು ಬಲ್ಲರು.

1213. ಕ್ರಿಯಾಜ್ಞಾನ ಸಂಬಂಧ

ಕ್ರಿಯಾಜ್ಞಾನ ಸಂಬಂಧವೆಂದು ನುಡಿವರು –
ಕ್ರೀಯಲ್ಲಿ ಅಂಗಲಿಂಗ ಸಂಬಂಧವನರಿಯರು
ಜ್ಞಾನದಲ್ಲಿ ಲಿಂಗಜಂಗಮ ಸಂಬಂಧವನರಿಯರು
ಕ್ರೀಯಲ್ಲಿ ಅರ್ಪಿತ ಪ್ರಸಾದ ಸಂಬಂಧವನರಿಯರು
ಜ್ಞಾನದಲ್ಲಿ ತೃಪ್ತಿ ಪರಿಣಾಮವರಿದು
ಕ್ರೀಯೊಳಗಿರ್ದು ಜ್ಞಾನಸಂಪನ್ನನಾಗಿರಬಲ್ಲ ಶರಣಂಗೆ
ಕ್ರಿಯೆಯೇ ತನು; ಜ್ಞಾನವೇ ಪ್ರಾಣ
ತನು ಲಿಂಗವಾಗಿ, ಪ್ರಾಣ ಜಂಗಮವಾಗಿ
ತನುವ ಸಯಮಾಡಿ, ಪ್ರಾಣವ ಲಿಂಗಜಂಗಮಕ್ಕರ್ಪಿಸಿ
ನಿರಂತರ ಸಾವಧಾನಿಯಾಗಿರಬಲ್ಲ ಪ್ರಸಾದಿಗಳ
ಎನಗೊಮ್ಮೆ ತೋರಿ ಸಲಹಾ, ಲಿಂಗದೇವಾ.

ಲಿಂಗಾಯತ ಧರ್ಮವು ಜ್ಞಾನ ಪ್ರಧಾನವು ಅಹುದು. ಕ್ರಿಯಾ ಪ್ರಧಾನವೂ ಅಹುದು. ಕ್ರಿಯೆ ಮತ್ತು ಜ್ಞಾನ ಒಂದು ನಾಣ್ಯದ ಎರಡು ಮುಖಗಳಂತೆ. ಕೆಲವು ಪಂಥಗಳು ಜ್ಞಾನ ಪ್ರಧಾನವಾಗಿದ್ದರೆ ಮತ್ತೆ ಕೆಲವು ಆಚಾರಪ್ರಧಾನವಾಗಿರುತ್ತದೆ. ಆದರೆ ಬಸವ ಪಥವು ಉಭಯ ತತ್ತ್ವಗಳನ್ನು ಸಮತೋಲನಗೊಳಿಸುತ್ತದೆ. ಇದಕ್ಕೆ ಜ್ಞಾನಕ್ರಿಯಾ ಸಮಸಮುಚ್ಛಯವಾದ ಎಂದು ಹೇಳಲಾಗುವುದು. ಕ್ರಿಯೆಯಲ್ಲಿ ಅಂಗ (ಇಷ್ಟ) ಲಿಂಗಧಾರಣೆ ಇರಬೇಕು. ಜ್ಞಾನದಿಂದ ಲಿಂಗದೇವನ ನಿಜ ಸ್ವರೂಪವನ್ನು ಅರಿಯಬೇಕು. ಆ ನಿರಾಕಾರ ಲಿಂಗದೇವನ ಸಾಕಾರವೇ ಜಂಗಮ ಎಂದು ಅರಿಯಬೇಕು. ಕ್ರಿಯೆಯಲ್ಲಿ ಪ್ರಸಾದವನ್ನು ಲಿಂಗಕ್ಕೆ ಅರ್ಪಿಸಿ ಸವಿಯಬೇಕು. ಜ್ಞಾನದಲ್ಲಿ ಜೀವನದಲ್ಲಿ ಬರುವ ಸುಖದುಃಖ,–ಎಡರು ತೊಡರು ಎಲ್ಲವೂ ದೇವನ ಪ್ರಸಾದವೆಂದು ನಂಬಿ ಸಂತೃಪ್ತ ಮನೋಭಾವ, ಚಿತ್ತಸಮತೆ ಹೊಂದಿರಬೇಕು. ಸದಾಚಾರದ ಮಾರ್ಗದಲ್ಲಿ ನಡೆಯಬೇಕು. ಜೊತೆಗೆ ಎಲ್ಲ ತತ್ತ್ವಗಳ ಜ್ಞಾನವನ್ನು ಹೊಂದಿರಬೇಕು. ಕ್ರಿಯೆಯೇ ಶರೀರ, ಜ್ಞಾನವೇ ಪ್ರಾಣ ಎಂಬಂತೆ ಎರಡರ ಸಂಬಂಧ ಇರಬೇಕು. ಶರೀರವೇ ಸರ್ವಾಂಗ ಲಿಂಗಮಯವಾಗಿ, ಪ್ರಾಣವೇ ಜಂಗಮವಾಗಿ ಶರೀರವನ್ನು ಸೇವೆಯ ಸಾಧನವಾಗಿ ಮಾಡಿ, ಪ್ರಾಣವನ್ನು ದೇವನಿಗೆ ಮತ್ತು ಸಮಾಜಕ್ಕಾಗಿ ಮುಡುಪಿಟ್ಟು ಸದಾ ಶಾಂತಚಿತ್ತನಾಗಿ ಇರಬಲ್ಲವನೇ ನಿಜ ಪ್ರಸಾದಿ. ಅಂಥ ಪ್ರಸಾದಿಗಳನ್ನು ನನಗೆ ತೋರಿಸಿ ನನ್ನನ್ನು ಸಲಹು ಲಿಂಗದೇವಾ.

1214. ಅರ್ಪಣೆಯಲ್ಲಿ ಅಪಾರ ಸಂತೃಪ್ತಿ

ಅರ್ಪಿಸಿದ ಸುಖ ತಪ್ಪದೆ ಇಂಬುಗೊಂಡಿತ್ತಾಗಿ
ಅಲ್ಲಿಯೆ ಅರ್ಪಿತವಾಯಿತ್ತಯ್ಯಾ !
ಅಂಗವೆಂಬ ಶಂಕೆ ತಾನೆತ್ತ ಹೋಯಿತ್ತೆಂದರಿಯೆ;
ಕಾಯಸುಖವೆ ಲಿಂಗಸುಖಕ್ಕೀಡಾಯಿತ್ತು !
ಅಂತಪ್ಪ ಅರ್ಪಿತದಷ್ಟ ತಲೆಗೇರಿದಲ್ಲಿ
ನೀ ಮುಂತಾಗಿರ್ದೆ. ಲಿಂಗದೇವಾ.

ಲಿಂಗಕ್ಕೆ ಅರ್ಪಣೆ ಮಾಡುವುದರಲ್ಲಿ ಅಪಾರವಾದ ಸುಖವು ಪ್ರಾಪ್ತಿಯಾಗುತ್ತದೆ. ಸೃಷ್ಟಿಕರ್ತನಾದ ಲಿಂಗದೇವನಿಗೆ ಧನ್ಯವಾದವನ್ನು ಅರ್ಪಿಸಿದ ಸಂತೃಪ್ತ ಮನೋಭಾವ

ಇಂಬುಗೊಳ್ಳುವುದರಿಂದ ದೇವನಿಗೆ ಅರ್ಪಿತವಾಗುವುದು. ಶರೀರ ಉಂಟೆಂಬ ಭಾವ ತೊಲಗಿ ಲಿಂಗಭಾವವು ಅಳವಡುತ್ತದೆ. ಶರೀರವು ಸುಖ-ಸಂತೃಪ್ತಿ ಅನುಭವಿಸುವಾಗಲೆಲ್ಲ ಲಿಂಗದೇವನೇ ಆ ಸುಖವನ್ನು ಅನುಭವಿಸುತ್ತಿದ್ದಾನೆಂಬ ಭಾವ ಅಳವಡುವುದು. ಹೀಗೆ ಅರ್ಪಿತದ ಮತ್ತು (ನಶೆ)ತಲೆಗೇರಿದಾಗ ಶರಣನ ಮೂಲಕ ಲಿಂಗದೇವನೇ ಮುಂದಾಗಿ ಅನುಭವಿಸುವನು.

ಇದಕ್ಕೆ ಏಕಭಾಜನ (ಸ್ಥಲ) ಎನ್ನುವರು. ಶರಣನ ಶರೀರ ಎಂಬ ತಟ್ಟೆಯಲ್ಲಿಯೇ ಶರಣಸತಿ-ಲಿಂಗಪತಿ ಇಬ್ಬರೂ ಒಟ್ಟಾಗಿ ಪ್ರಸಾದ ಸ್ವೀಕರಿಸುವರು. ಅಂಥ ದಿವ್ಯ ಆನಂದ ಪ್ರಸಾದ ಅರ್ಪಣೆಯಲ್ಲಿದೆ. ಈ ವಚನಕ್ಕೆ ವ್ಯಾಖ್ಯಾನ ಬರೆದಂತೆ ಷಣ್ಮುಖ ಶಿವಯೋಗಿಗಳ ಒಂದು ವಚನ ಬರುತ್ತದೆ. ಅದನ್ನು ನೋಡೋಣ.

ಎನ್ನ ತನುವಿನೊಳಗೆ ನಿಮ್ಮ ತನು ಅಡಗಿರ್ಪುದು.
ನಿಮ್ಮ ತನುವಿನೊಳಗೆ ಎನ್ನ ತನುವಡಗಿರ್ಪುದು.
ಎನ್ನ ಮನದೊಳಗೆ ನಿಮ್ಮ ಮನವಡಗಿರ್ಪುದು;
ನಿಮ್ಮ ಮನದೊಳಗೆ ಎನ್ನ ಮನವಡಗಿರ್ಪುದು.
ಎನ್ನ ಪ್ರಾಣದೊಳಗೆ ನಿಮ್ಮ ಪ್ರಾಣವಡಗಿರ್ಪುದು;
ನಿಮ್ಮ ಪ್ರಾಣದೊಳಗೆ ಎನ್ನ ಪ್ರಾಣವಡಗಿರ್ಪುದು.
ಎನ್ನ ಜೀವದೊಳಗೆ ನಿಮ್ಮ ಜೀವವಡಗಿರ್ಪುದು;
ನಿಮ್ಮ ಜೀವದೊಳಗೆ ಎನ್ನ ಜೀವವಡಗಿರ್ಪುದು.
ಎನ್ನ ಭಾವದೊಳಗೆ ನಿಮ್ಮ ಭಾವವಡಗಿರ್ಪುದು;
ನಿಮ್ಮ ಭಾವದೊಳಗೆ ಎನ್ನ ಭಾವವಡಗಿರ್ಪುದು.
ಎನ್ನ ಕರಣಂಗಳೊಳಗೆ ನಿಮ್ಮ ಕರಣಂಗಳಡಗಿರ್ಪುವು;
ನಿಮ್ಮ ಕರಣಂಗಳೊಳಗೆ ಎನ್ನ ಕರಣಂಗಳಡಗಿರ್ಪುವು.
ಎನ್ನ ಇಂದ್ರಿಯಂಗಳೊಳಗೆ ನಿಮ್ಮ ಇಂದ್ರಿಯಂಗಳಡಗಿರ್ಪುವು.
ಎನ್ನ ವಿಷಯಂಗಳೊಳಗೆ ನಿಮ್ಮ ವಿಷಯಂಗಳಡಗಿರ್ಪುವು.
ನಾನು ನೀನೆಂಬ ಭಿನ್ನಭಾವವನಳಿದು, ಪುಷ್ಪ ಪರಿಮಳದಂತೆ,
ರೂಪುರುಚಿಯಂತೆ ಅವಿರಳ ಸಮರಸವಾಗಿರ್ದೆನಯ್ಯಾ ಅಖಂಡೇಶ್ವರಾ !

ವಚನ ಸಾಹಿತ್ಯ ಸಂಗ್ರಹ, ಪುಟ 645, ವಚನ 136

1215. ಗುರು-ಲಿಂಗ-ಜಂಗಮದ ತ್ರಿತತ್ತ್ವ

ನಿತ್ಯ ನಿರಂಜನ ಪರಂಜ್ಯೋತಿ ವಸ್ತು -
ಉಪದೇಶವ ಕೊಟ್ಟು ಗುರುವಾದ, ಕರಸ್ಥಲಕ್ಕೆ ಬಂದು ಲಿಂಗವಾದ
ಹಸರವಾದ ಪ್ರಪಂಚವನಳಿದು ದಾಸೋಹವ
ಮಾಡಿಸಿಕೊಂಡು ಜಂಗಮವಾದ
ಇಂತೀ ಗುರುಲಿಂಗ ಜಂಗಮ ಒಂದೆಯಲ್ಲದೆ ಭಿನ್ನವಿಲ್ಲ
ಈ ಮೂರಕ್ಕೆ ಮೂರನಿತ್ತು ಮೂರನೊಂದು ಮಾಡಬಲ್ಲಡೆ
ಆತ ಪ್ರಸಾದಕಾಯನಯ್ಯಾ ಲಿಂಗದೇವಾ.

ಇದು ಬಹಳ ಮಹತ್ವಪೂರ್ಣ ವಚನ. ಗುರು-ಲಿಂಗ-ಜಂಗಮ- ಈ ಮೂರು ಲಿಂಗಾಯತ ಧರ್ಮದಲ್ಲಿ ಮೂರು ಪೂಜ್ಯ ವಸ್ತುಗಳು. ಇವು ನಿರಾಕಾರ ದೇವರ ಸಾಕಾರ ಮುಖಗಳು. ನಿತ್ಯನೂ, ನಿರಂಜನನೂ. ಪರಂಜ್ಯೋತಿ ಸ್ವರೂಪನು ಆದ ಸೃಷ್ಟಿಕರ್ತ ಪರಮಾತ್ಮನು ಶಿಷ್ಯನಿಗೆ ಉಪದೇಶವನ್ನು ಕೊಡುವ ಗುರುವಾಗುತ್ತಾನೆ. ಕರಸ್ಥಲದಲ್ಲಿ ಬಂದು ಕುಳಿತು ಪೂಜೆಗೊಳ್ಳುವ ಇಷ್ಟಲಿಂಗವಾಗುತ್ತಾನೆ. ವ್ಯಾಪಕವಾದ ಸಂಸಾರದ ಅಂದರೆ ನಾನು-ನನ್ನದು, ನನ್ನಿಂದ, ನನಗೆ ಎಂಬ ಅಂಟನ್ನು ಹರಿದು ದಾಸೋಹವ ಮಾಡಿಸಿಕೊಂಡು ಜಂಗಮವಾಗುತ್ತಾನೆ.

ಆದ್ದರಿಂದ ಗುರು-ಇಷ್ಟಲಿಂಗ-ಜಂಗಮ ಎಂಬ ತ್ರಿತತ್ತ್ವಗಳು ನಿರಾಕಾರ ದೇವನ ಸಾಕಾರ ಮುಖವಲ್ಲದೆ ಬೇರೆಯಲ್ಲ. ಆದ್ದರಿಂದ ಈ ಮೂರಕ್ಕೆ ತನು-ಮನ-ಧನ ಎಂಬ ತ್ರಿವಿಧ ಸಂಪತ್ತನ್ನು ನೀಡಿ ಪ್ರಸಾದ ಎಂಬ ತತ್ತ್ವವನ್ನಾಗಿ ಮಾರ್ಪಡಿಸಬಲ್ಲರೆ ಆತನು ಪ್ರಸಾದ ಕಾಯನು.

ಗುರು-ಲಿಂಗ-ಜಂಗಮದ ವ್ಯಾಖ್ಯಾನ ಸಿಗುವ ಮಹತ್ವಪೂರ್ಣ ವಚನವಿದು. ಗುರು ಎಂಬಲ್ಲಿ ಇಲ್ಲಿ ದೀಕ್ಷಾಗುರು ಎಂಬ ಭಾವವಿದೆ. ಸಂಕೋಚ ಸ್ವಭಾವದ ಗುರು ಬಸವಣ್ಣನವರು ಗುರುವು ದೇವರ ಪ್ರತಿನಿಧಿ ಎಂದು ಹೇಳಿ ದೀಕ್ಷಾಗುರುವಿನ ಸ್ಥಾನವನ್ನು ಏರಿಸಿದ್ದಾರೆ. ಮಂತ್ರದ ಉಪದೇಶ ಮಾಡಿದ ಗುರುವಿಗಿಂತಲೂ ಧರ್ಮದ ಮಹಾಉಪದೇಶ ಮಾಡಿದ ಧರ್ಮಗುರು ಬಸವಣ್ಣನವರು ಶ್ರೇಷ್ಠರಲ್ಲಿ ಶ್ರೇಷ್ಠರು. ಆದ್ದರಿಂದ ಅಷ್ಟಾವರಣದಲ್ಲಿ ಬರುವ ಗುರು ಎಂದರೆ ಧರ್ಮಗುರು ಬಸವಣ್ಣನವರು ಎಂದು ಅರ್ಥ ಮಾಡಿ ದೀಕ್ಷಾಗುರುವನ್ನು ಜಂಗಮದ ಸ್ಥಾನದಲ್ಲಿ ಇಡುವುದು ಸೂಕ್ತ. ಕರಸ್ಥಲಕ್ಕೆ ಬಂದು ಲಿಂಗವಾದ ಎಂಬಲ್ಲಿ ಲಿಂಗಾಯತ ಧರ್ಮದಲ್ಲಿ ಹುಟ್ಟಿದ ಮಗುವಿಗೆ ಲಿಂಗಧಾರಣೆಯಾಗುತ್ತದೆ ; ಅದು ಬಯಸದೆಯೇ ಬಂದ ಭಾಗ್ಯ ! ಜಂಗಮವೆಂದರೆ ಭಿಕ್ಷುಕನಲ್ಲ, ದಾಸೋಹ ಮಾಡಲು ಕಲಿಸುವ ಸಮಾಜ ಶಿಕ್ಷಕ.

1216. ನಿಜ ಪ್ರಸಾದ ಎಂದರೇನು ?

ಗುರು ಮುಂತಾಗಿ ಕೊಂಬುದು ಪ್ರಸಾದವಲ್ಲ.
ಲಿಂಗ ಮುಂತಾಗಿ ಕೊಂಬುದು ಪ್ರಸಾದವಲ್ಲ
ಜಂಗಮ ಮುಂತಾಗಿ ಕೊಂಬುದು ಪ್ರಸಾದವಲ್ಲ.
ಪ್ರಸಾದ ಮುಂತಾಗಿ ಕೊಂಬುದು ಪ್ರಸಾದವಲ್ಲ
ಅಂತಪ್ಪ ಪ್ರಸಾದವೇ ಬೇಕು
ಅಂತಪ್ಪ ಪ್ರಸಾದವ ತೋರಿ
ಬದುಕಿಸಯ್ಯಾ ಲಿಂಗದೇವಾ

ಗುರುಗಳ ಪಾದಪೂಜೆ ಮಾಡಿ, ಅವರಿಂದ ಭಕ್ತರು ಕರುಣ ಪ್ರಸಾದವನ್ನು ಪಡೆದುಕೊಂಡೆನೆಂದು ಹೆಮ್ಮೆಯಿಂದ ನುಡಿವರು. ಇದೊಂದು ಯಾಂತ್ರಿಕ ಕ್ರಿಯೆ ! ಇದೇ ನಿಜವಾದ ಪ್ರಸಾದವಲ್ಲ. ಇಷ್ಟಲಿಂಗಪೂಜೆ ಮಾಡಿ ಅದಕ್ಕೆ ಕಲ್ಲುಸಕ್ಕರೆ, ದ್ರಾಕ್ಷಿ ಮುಂತಾಗಿ ನೀಡಿ ತೀರ್ಥ-ಪ್ರಸಾದ ರೂಪದಲ್ಲಿ ಕರುಣೋದಕ-ಕರುಣಪ್ರಸಾದ ಪಡೆವರು. ಇದು ಒಂದು ಯಾಂತ್ರಿಕ ಕ್ರಿಯೆ. ಇದೇ ನಿಜವಾದ ಪ್ರಸಾದವಲ್ಲ. ಜಂಗಮನ ಮೂಲಕ ಪಡೆವುದೇ ಪ್ರಸಾದವಲ್ಲ. ಬಹು ನಿಷ್ಠೆಯಿಂದ ಮಡಿಯಿಂದ ಸ್ನಾನ ಮಾಡಿ-ಗದ್ದುಗೆಯ ಮೇಲೆ ಕುಳಿತು ಪೂಜೆ ಮಾಡಿ, ಗದ್ದುಗೆಯ ಮೇಲೆ ಕುಳಿತೇ ಪ್ರಸಾದ ಉಂಡು, ತಾವು ಪ್ರಸಾದಿಕರೆಂದು ಕೆಲವರು ಬೀಗುವರು. ಇದೇ ಪ್ರಸಾದವಲ್ಲ. ಲಿಂಗದೇವನ ಅನುಗ್ರಹದಲ್ಲಿ ಪೂರ್ಣ ನಂಬಿಕೆಯನ್ನಿಟ್ಟು, ಉದಾಸೀನವನ್ನು ಎಂಥ ಪ್ರಸಂಗದಲ್ಲಿಯೂ ತಾಳದೆ ಜೀವನದಲ್ಲಿ ಕಷ್ಟ-ಸುಖ, ನೋವು-ನಲಿವು ಏನೇ ಬಂದರೂ ವಿಶ್ವಾಸ ಕಳೆದುಕೊಳ್ಳದೆ ಚಿತ್ತ ಸಮತೆ ಹೊಂದಿ ಸಂತೃಪ್ತ ಮನೋಭಾವ ಹೊಂದಿರುವುದೇ ಪ್ರಸಾದಿ ಸ್ಥಲ. ಅಂತಪ್ಪ ಪ್ರಸಾದವನ್ನು ನನಗೆ ಕರುಣಿಸು ಲಿಂಗದೇವ ಎಂದು ದೇವನಲ್ಲಿ ಗುರು ಬಸವಣ್ಣನವರು ಬೇಡುತ್ತಾರೆ.

1217. ಲಿಂಗದೇವನಿಗೆ ಪುನಃ ಅರ್ಪಿಸಬಹುದೆ ?

ಪಂಚೇಂದ್ರಿಯಂಗಳನರತು ತನುಮನವ ನಿಲಿಸಬಲ್ಲಡೆ
ಚನ್ನನ ಪ್ರಸಾದ ಲಿಂಗಕ್ಕೋಗರವಾಗದೆ ?
ನಾಲಗೆ ರುಚಿಯ ನಾಣಕ್ಕೆ ತಂದು ಮರಳಿ ಲಿಂಗಾರ್ಪಿತವ ಮಾಡಿದಡೆ
ಮನದ ಭಾವವ ಕೈಕೊಂಡ ಕಾರಣ
ನಮ್ಮ ಲಿಂಗದೇವನಿಗೆ ಕೊಡಬಹುದು ಕಾಣಾ.

ಅನೇಕರನ್ನು ಕಾಡುತ್ತಿದ್ದ ಒಂದು ಸಂದೇಹವನ್ನು ಗುರು ಬಸವಣ್ಣನವರು ಈ ವಚನದಲ್ಲಿ ಪರಿಹರಿಸಿದ್ದಾರೆ. ಕಾಂಚೀಪುರದ ಮಾದಾರ ಚನ್ನಯ್ಯ ಅಂಬಲಿ ಕುಡಿಯಲು ಕುಳಿತಿರುತ್ತಾನೆ. ತಟ್ಟೆಯಲ್ಲಿ ಹಾಕಿಕೊಂಡ ಮೊದಲನೆ ಸುರುಕನ್ನು ಸವಿಯುತ್ತಾನೆ. ಅಂಬಲಿ ಬಹುರುಚಿ ಎನ್ನಿಸುತ್ತದೆ ಅದನ್ನು ಶಿವನಿಗೆ (ಜಂಗಮನಿಗೆ ಅರ್ಥಾತ್ ಶೈವ ಸನ್ಯಾಸಿಗೆ) ಇರಲೆಂದು ಆ ಅಂಬಲಿಯನ್ನು ಎತ್ತಿ ಇಡಿಸುತ್ತಾನೆ ಮತ್ತು ಆ ಶೈವ ಗುರುವಿಗೆ ಆಹ್ವಾನವನ್ನು ಕಳಿಸುತ್ತಾನೆ. ಅವರು ಬಂದು ಸ್ವೀಕರಿಸುತ್ತಾರೆ. ಇಲ್ಲಿ ಏಳುವ ಸಂದೇಹವೇನೆಂದರೆ ಮಾದಾರ ಚನ್ನಯ್ಯ ಎಂಜಲನ್ನು ಗುರುವಿಗೆ ತೆಗೆದಿಟ್ಟುದು ಸರಿಯೇ? ದೊಡ್ಡವರಿಗೆ ಹಾಗೆ ಎಂಜಲನ್ನು ಕೊಡುವುದು ಅಪಚಾರವಲ್ಲವೆ ?

ನಾವು ಮೊದಲ ಬಾರಿಗೆ ಇಷ್ಟಲಿಂಗಕ್ಕೆ ನೈವೇದ್ಯ ಮಾಡಿ ಪ್ರಸಾದ ಸ್ವೀಕರಿಸಲು ತೊಡಗುತ್ತೇವೆ. ಧರ್ಮಪಿತರ ಇನ್ನೊಂದು ಆದೇಶ ಹೀಗಿದೆ.

ಮೌನದಲುಂಬುವುದು ಆಚಾರವಲ್ಲ
ಲಿಂಗಾರ್ಪಿತವಾದ ಬಳಿಕ ತುತ್ತಿಗೊಮ್ಮೆ
'ಶಿವ ಶರಣು' ಎನ್ನುತ್ತಿರಬೇಕು
ಕರಣ ವೃತ್ತಿಗಳಡಗುವುವು
ನಮ್ಮ ಲಿಂಗದೇವನ ನೆನೆಯುತ್ತಲುಂಡಡೆ. ಬ.ವ.ದೀ. 782

ತುತ್ತಿಗೊಮ್ಮೊಮ್ಮೆ 'ಶಿವ ಶರಣು' ಎನ್ನುತ್ತಿರಬೇಕು. ಆಗ ಎಂಜಲನ್ನು ಅರ್ಪಣೆ ಮಾಡಿದಂತೆ ಆಗದೆ? ಈ ಎರಡು ಸಂದೇಹಗಳಿಗೆ ಈ ವಚನದಲ್ಲಿ ಉತ್ತರವಿದೆ. ಚನ್ನಯ್ಯನಿಗೆ ಪಂಚೇಂದ್ರಿಯಗಳು ಪರಿಪಕ್ವ(ಅರತು)ವಾಗಿದ್ದವು. ಅಂಬಲಿ ಬಹು ರುಚಿಯಾಗಿತ್ತು. ಅದನ್ನು ತನ್ನ ಗುರುವಿಗೆ ಕೊಡಬೇಕಿತ್ತು. ರುಚಿಯಾದ ವಸ್ತುವನ್ನು ಸವಿಯುತ್ತಿದ್ದಂತೆಯೇ ಸಾಮಾನ್ಯವಾಗಿ ಉಳಿದುದನ್ನು ಬಾಯಿ ನೀರು ಬಿಡುತ್ತ ಸಾಮಾನ್ಯ ಜನರು ತಿಂದು ಮುಗಿಸುತ್ತಾರೆ. ಆದರೆ ಚನ್ನಯ್ಯ ತನ್ನ ನಾಲಿಗೆಯನ್ನು ನಿಯಂತ್ರಿಸಿ, ಚೆನ್ನಾಗಿರುವುದು ಗುರುವಿಗೆ ಇರಲಿ ಎಂಬ ಭಕ್ತಿ ನಿರ್ಭರತೆಯಲ್ಲಿ ಆ ಭಕ್ತನಿಗೆ ಎಂಜಲಿನ ಕಲ್ಪನೆ ಬರಲಿಲ್ಲ. ಪಂಚೇಂದ್ರಿಯಗಳನ್ನು, ತನ್ನ ತನುಮನಗಳನ್ನು ನಿಲ್ಲಿಸಬಲ್ಲವನಾದ. ಅದರಿಂದ ಅವನ ಪ್ರಸಾದ (ಅದು ಎಂಜಲಲ್ಲ) ಶಿವನಿಗೆ ಮೆಚ್ಚುಗೆಯ ಓಗರವಾಯಿತು. ಬೇರೆ ಅಂಬಲಿಯನ್ನು ಮಾಡಿಸಿ ನೀಡಬಹುದಿತ್ತು. ಆದರೆ ಆ ಅಂಬಲಿ ಈಗಿನ ಅಂಬಲಿಯಷ್ಟು ರುಚಿಯಾಗುವುದು ಎಂಬ ಭರವಸೆ ಹೇಗೆ? ಬಡಭಕ್ತನಾದ ಚೆನ್ನಯ್ಯನ ಬಳಿ ಬೇರೆ ಅಂಬಲಿ ಮಾಡಲು ಹಿಟ್ಟು ಮುಂತಾದ ಪದಾರ್ಥಗಳು ಇರಲಿಕ್ಕಿಲ್ಲ. ಹೀಗಾಗಿ ಅಂದು ತಾನು ಉಪವಾಸವಿದ್ದು ತನ್ನ ಗುರುವಿಗೆ ಉಣ್ಣಿಸಿರಬಹುದು. ಭಕ್ತಿಗೆಯೂ ಬೇಟಕ್ಕೆಯೂ ಜಾತಿ ಸೂತಕವುಂಟೆ ? ಎಂದು ಅಕ್ಕಮಹಾದೇವಿ ಹೇಳುವಂತೆ ಪ್ರೀತಿ ಮತ್ತು ಭಕ್ತಿಯ ಆವೇಶದಲ್ಲಿ ಎಂಜಲು ಮುಂಜಲು ಬರುವುದಿಲ್ಲ.

ನಾಲಿಗೆಯ ರುಚಿಯನ್ನು ನಿಯಂತ್ರಣಕ್ಕೆ (ನಾಣಕ್ಕೆ) ತಂದು ತುತ್ತಿಗೊಮ್ಮೊಮ್ಮೆ 'ಶಿವಶರಣು' ಎನ್ನುತ್ತಿದ್ದರೆ ಅದು ಎಂಜಲಲ್ಲ. ಮನಸ್ಸು ಭಾವಗಳು ಸಂಪೂರ್ಣ ಶರಣಾಗಿರುವುದರಿಂದ ಪ್ರತಿ ತುತ್ತೂ ಲಿಂಗದೇವನಿಗೆ ಅರ್ಪಿತವಾಗಬೇಕು ಎಂಬ ಭಾವದಿಂದ ಖಂಡಿತವಾಗಿಯೂ ಕೊಡಬಹುದು.

1218. ಗುರು ಪಾದೋದಕ-ಪ್ರಸಾದ

ನಿನಗೆ ಮಜ್ಜನಕ್ಕೆರೆವುದಕ್ಕೆ ಮುನ್ನ
ಶ್ರೀ ಗುರುವಿನ ಪಾದೋದಕವ ಕೊಂಬೆ
ನಿನಗಾರೋಗಣೆಯ ಮಾಡಿಸುವುದಕ್ಕೆ ಮುನ್ನ
ಶ್ರೀ ಗುರುವಿನ ಪ್ರಸಾದವ ಕೊಂಬೆ
ಎನಗೆಯೂ ನಿನಗೆಯೂ ಸಹಭೋಜನ

ಎನಗೆಯೂ ನಿನಗೆಯೂ ಏಕಾರ್ಥಶಯನ
ನೀನೆನಗೆ ಚಿಕ್ಕ ತಮ್ಮ ಲಿಂಗದೇವಾ.

ಈ ವಚನದಲ್ಲಿ ಒಂದು ಸಂದೇಹಕ್ಕೆ ಪರಿಹಾರ ನೀಡಲಾಗಿದೆ.

ದೇವಾ, ನಿನಗೆ ಮಜ್ಜನಕ್ಕೆ ಎರೆಯುವುದಕ್ಕೆ ಮುನ್ನವೇ ನಾನು ಶ್ರೀಗುರುವಿನ ಪಾದೋದಕವನ್ನು ಪಡೆಯುತ್ತೇನೆ. ನಿನಗೆ ನೈವೇದ್ಯ ಮಾಡಿಸುವುದಕ್ಕೆ ಮೊದಲು ಶ್ರೀ ಗುರುವಿನ ಪ್ರಸಾದವನ್ನು ಸ್ವೀಕರಿಸುತ್ತೇನೆ ಎನ್ನುತ್ತಾರೆ. ಇಲ್ಲಿ ಪ್ರಶ್ನೆ ಏನೆಂದರೆ ಇಷ್ಟಲಿಂಗಪೂಜೆ ಮಾಡದೆ ಗುರುಗಳ ಪಾದೋದಕ-ಪ್ರಸಾದವನ್ನು ಪಡೆಯಬಹುದೆ ? ಎಂಬುದು.

ಗುರುಗಳು ಅತ್ಯವಸರದಿಂದ ಹೊರಟಿರುತ್ತಾರೆ. ಸಮಯಾಭಾವವಿರುತ್ತದೆ. ಆಗ ಭಕ್ತನು ಇಷ್ಟಲಿಂಗ ಪೂಜೆ ಮಾಡಿರುವುದಿಲ್ಲ ; ಕೇವಲ ಸ್ನಾನ ಮಾಡಿರುತ್ತಾರೆ. ಆಗ ಏನು ಮಾಡಬೇಕು? ಗುರುಗಳ ಪಾದಪೂಜೆ ಮಾಡಿ, ತನ್ನ ಇಷ್ಟಲಿಂಗದ ಮೇಲೆ ಪಾದೋದಕವನ್ನು ಎರೆದು, ಪ್ರಸಾದವನ್ನು ಪಡೆದುಕೊಳ್ಳಬೇಕು. ಏಕೆಂದರೆ ಗುರುಗಳು ಸದಾ ಕಾಲ ಸಿಗುವುದಿಲ್ಲ. ಇಷ್ಟಲಿಂಗ ಜೊತೆಗೇ ಇರುತ್ತದೆ. ಅದರ ಪೂಜೆ ನಂತರ ಮಾಡಲು ಬರುತ್ತದೆ. ಇಷ್ಟಲಿಂಗದ ನೆತ್ತಿಯ ಮೇಲೆ 3 ಬಾರಿ ಎರೆದು, ಪ್ರಸಾದ ಸಹಿತವಾಗಿ ಸ್ವೀಕರಿಸುವುದರಿಂದ ಭಕ್ತನಿಗೂ ಮತ್ತು ಲಿಂಗದೇವನಿಗೂ ಸಹ ಭೋಜನ. ಇಷ್ಟಲಿಂಗದ ಮೂಲಕವೇ ಏಕಾರ್ಥ ಶಯನ. ನಾನು ಅಂದರೆ ಭಕ್ತ ಮೊದಲು ಹುಟ್ಟಿದವನು ; ನೀನು ಅಂದರೆ ಇಷ್ಟಲಿಂಗ ನಂತರ ಬಂದವನು ಹೀಗಾಗಿ ನೀನು ನನ್ನ ಚಿಕ್ಕತಮ್ಮ. ಇಷ್ಟಲಿಂಗದ ಮೂಲಕವೇ ಗುರುಗಳ (ಮತ್ತು ಜಂಗಮರ) ಪಾದೋದಕ -ಪ್ರಸಾದವನ್ನು ಸ್ವೀಕರಿಸಬೇಕೇ ವಿನಾ ಇಷ್ಟಲಿಂಗಪೂಜೆ ಇಲ್ಲದೆ ಬರೀ ಕೈಯಲ್ಲಿ ಸ್ವೀಕರಿಸಬಾರದು.

ತಿದ್ದುಪಡಿ (**amendment**): ಗುರು-ಜಂಗಮರ ಪಾದೋದಕವನ್ನು ಇಷ್ಟಲಿಂಗದ ನೆತ್ತಿಯ ಮೇಲೆ ಎರೆಯುವುದನ್ನು ನಿಷೇಧಿಸಲಾಗಿದೆ. ಆದರ್ಶವಂತರೂ ತಪಸ್ವಿಗಳೂ ಆದ ಗುರು-ಜಂಗಮರು ಈ ಕಾಲದಲ್ಲಿ ಸಿಕ್ಕುವುದು ಕಷ್ಟ ಮತ್ತು ಇಷ್ಟಲಿಂಗವು ಸೃಷ್ಟಿಕರ್ತನ ಕುರುಹು. ಸಾಮಾನ್ಯ ಮಾನವರಾದ ಗುರು-ಜಂಗಮರ ಪಾದೋದಕವನ್ನು ಇಷ್ಟಲಿಂಗದ ಮೇಲೆ ಎರೆಯುವುದು ಸೃಷ್ಟಿಕರ್ತನಿಗೆ ಮಾಡುವ ಅವಮಾನ ಎಂದೇ ನಮ್ಮ ಅಭಿಪ್ರಾಯ.

ಪದೋದಕ : ಪಾದೋದಕದ ಬದಲು ಪದೋದಕವಾಗಿ ಹಸ್ತೋದಕವನ್ನು ಮಾಡಿ ಭಕ್ತರನ್ನು ಗುರು ಜಂಗಮರು ಅನುಗ್ರಹಿಸುವುದು ಬದಲಾದ ಕಾಲಮಾನದಲ್ಲಿ ಬಹುಸೂಕ್ತ. ಐದೂ ಬೆರಳುಗಳಿಗೆ ವಿಭೂತಿಯನ್ನು ಧರಿಸಿ ಓಂ ಶ್ರೀ ಗುರು ಬಸವಲಿಂಗಾಯನಮಃ ಮಂತ್ರವನ್ನು 12 ಬಾರಿ ಪಠಿಸಿ ಒಂದು ಲೋಟದಲ್ಲಿ ನೀರನ್ನು ತೆಗೆದುಕೊಂಡು ಆ ನೀರಿನಲ್ಲಿ ಷಟ್ಕೋನ ಪ್ರಣವವನ್ನು, ಜಯ ಬಸವರಾಜ ಭಕ್ತ ಜನ ಸುರಭೂಜ ಶ್ಲೋಕವನ್ನು ಹೇಳಿ ಬರೆದು "ರಕ್ಷಿಸು ಶ್ರೀ ಗುರು ಬಸವ" ಎಂದು ಮೂರುಬಾರಿ ಬೆರಳುಗಳನ್ನು ಎದ್ದಿ ಮಂತ್ರೋದಕವಾಗಿ ಮಾಡಬೇಕು. ಅದನ್ನು ಭಕ್ತರ ಇಷ್ಟಲಿಂಗದ ನೆತ್ತಿಯ ಮೇಲೆ 3 ಬಾರಿ ಎರೆಯಬೇಕು, ಪ್ರಸಾದವಾಗಿ ಕಲ್ಲು ಸಕ್ಕರೆ, ದ್ರಾಕ್ಷಿ, ಗೋಡಂಬಿ ಇತ್ಯಾದಿ ಯಾವುದಾದರೊಂದನ್ನು ಕೊಡಬೇಕು.

1219. ದೇವರು ಒಬ್ಬ ಕುಂಬಾರ

ನಿನ್ನಾಳಿ ಕುಂಬಾರನ ಕೆಲಸದೋಪಾದಿ
ಉದಕದ ಶೈತ್ಯವನೇ ಕೊಟ್ಟು
ನೂಲೆಳೆಯಲ್ಲಿ ಗೋಣ ಕೊಯ್ದು
ವಾಯುವಿನ ಶೈತ್ಯದಲ್ಲಿ ಆರಿಸಿ,
ಅಗ್ನಿಮುಖದಲ್ಲಿ ಬೇರೆ ಭಾಂಡವೆಂದೆನಿಸಿದಂತೆ ಲಿಂಗದೇವಾ.

ಸೃಷ್ಟಿಯನ್ನು ಒಂದು ಘಟಕ್ಕೆ (ಮಡಿಕೆ, ಕುಂಭ)ಹೋಲಿಸಿ, ದೇವರನ್ನು ಕುಂಬಾರನಿಗೆ ಹೋಲಿಸಲಾಗುವುದು ಘಟವನ್ನು ನೋಡಿ ಕುಂಬಾರನನ್ನು ಊಹಿಸುವಂತೆ ಸೃಷ್ಟಿ ಎಂಬ

ಕುಂಭವನ್ನು ನೋಡಿ ಅನುಮಾನ ಪ್ರಮಾಣದಿಂದ ದೇವರೆಂಬ ಕುಂಬಾರನನ್ನು ಊಹಿಸಲಾಗುವುದು.

ಲಿಂಗದೇವಾ, ನೀನು ಸೃಷ್ಟಿಕರ್ತ, ನಿನ್ನ ಕೆಲಸ ಕುಂಬಾರನ ಕೆಲಸದಂತೆ. ಜಲತತ್ತ್ವದಲ್ಲಿ ಮೂಲ ದ್ರವ್ಯವಾದ ಪ್ರಥ್ವಿ ತತ್ತ್ವವನ್ನು ಕಲಸಿ, ನೂಲಿನ ಎಳೆಯಲ್ಲಿ ಗೋಣ ಕೊಯ್ದು ಆಕಾರವನ್ನು ಕೊಟ್ಟು, ವಾಯು ತತ್ತ್ವದಲ್ಲಿ ತೇವವನ್ನು ಆರಿಸಿ, ಅಗ್ನಿ ಮುಖದಲ್ಲಿ ಸುಟ್ಟು ಜಗತ್ತೆಂಬ ಕುಂಭವನ್ನು ನಿರ್ಮಿಸಿದ್ದೀಯ."

1220. ದೇವರು ಪ್ರಳಯಾತೀತ

ಧರೆ ರಸಾತಳಕ್ಕಿಳಿವಂದು, ಹರಿಬ್ರಹ್ಮಾದಿಗಳಳಿವಂದು
ಮಹದೇವ ಮಹಾದೇವ ಎನುತಿರ್ದನು, ಅದೆಂತೆಂದಡೆ ;
ಬ್ರಹ್ಮಾಂಡಾನಾಮಸಂಖ್ಯಾನಾಂ ಬ್ರಹ್ಮವಿಷ್ಣುಮಹತ್ಮನಃ ।
ಯತ್ರೋದಯಂ ಲಯಂ ಯಾಂತಿ ಮಹಾದೇವ ಇತಿ ಸ್ಮೃತಃ ॥
ಎಂದುದಾಗಿ, ಅಗ್ರದ ಕೊನೆಯ ತುದಿಯಿಂದತ್ತತ್ತ
ತತ್ತ್ವಮಸಿಯ ಮೀರಿದ ನಮ್ಮ ಲಿಂಗದೇವ.

ಪ್ರಳಯಕಾಲದಲ್ಲಿ ನಾವು ವಾಸಿಸುವ ಧರೆಯು ಅತ್ಯಂತ ಕೆಳಗಿನ ಮಟ್ಟಕ್ಕೆ ಹೋಗುವುದು. ಹರಿ ಬ್ರಹ್ಮಾದಿದೇವತೆಗಳು ಅಳಿಯುವರು. ಆಗ ಉಳಿಯುವವನೊಬ್ಬನೇ. ಮಹಾದೇವ–**Great God.** ದೇವನು ಎಲ್ಲವನ್ನು ಮೀರಿ ಅತೀತವಾಗಿ ನಿಲ್ಲುವನು.

1221. ಶಿವನು ಲೀಲಾಮೂರ್ತಿ

ಕಾಮದಹನವ ಮಾಡಿದನು; ದಕ್ಷನ ಯಜ್ಞವ ಕೆಡಿಸಿದನು
ಒಳ್ಳೆಯ ತ್ರಿಪುರವನುರುಹಿದನು:
ಹಾಳಾಹಳವನೊಮ್ಮೆ ಧರಿಸಿದನು
ನಮ್ಮ ಕೂಡಲಸಂಗಮದೇವನು.

ಶಿವನು ಹಲವಾರು ಲೀಲೆಗಳನ್ನು ಮಾಡಿದ್ದಾನೆ. ಕಾಮದಹನವನ್ನು ಮಾಡಿದ್ದಾನೆ. ದಕ್ಷಬ್ರಹ್ಮನ ಯಜ್ಞವನ್ನು ಕೆಡಿಸಿದ್ದಾನೆ. ತ್ರಿಪುರಗಳನ್ನು ಸುಟ್ಟು ಅವುಗಳನ್ನು ಆಳುತ್ತಿದ್ದ ತ್ರಿಪುರಾಸುರರ ಸಂಹಾರ ಮಾಡಿದ್ದಾನೆ. ಹಾಲಾಹಲವನ್ನು ಕುಡಿದು ಜಗತ್ತನ್ನು ರಕ್ಷಿಸಿದ್ದಾನೆ. ಇವೆಲ್ಲವೂ ಕೂಡಲಸಂಗಮದೇವನು ಮಾಡಿದ ಲೀಲೆಗಳು.

1222. ಅಯೋನಿ ಸಂಭವನಯ್ಯಾ ಲಿಂಗದೇವರು.

ಅಮೂಲ್ಯನು ಅಪ್ರಮಾಣನು ಅಗೋಚರಲಿಂಗವು
ಆದಿ ಮಧ್ಯಾವಸಾನಗಳಿಲ್ಲದ ಸ್ವತಂತ್ರಲಿಂಗ
ನಿತ್ಯ ನಿರ್ಮಳಲಿಂಗ
ನಮ್ಮ ಕೂಡಲಸಂಗದೇವರು.

ಪರಮಾತ್ಮನು ಅಮೂಲ್ಯನಾದವನು, ಬೆಲೆ ಕಟ್ಟಲಾರದವನು. ಅವನು ಅಪ್ರಮಾಣನು ಜ್ಞಾನವನ್ನು ಪಡೆಯಲು ಇರುವ ಪ್ರಮಾಣಗಳು **(Source of knowledge)** ಯಾವುವೆಂದರೆ ಪ್ರತ್ಯಕ್ಷ ಪ್ರಮಾಣ, ಅನುಮಾನ ಪ್ರಮಾಣ, ಆಗಮ ಪ್ರಮಾಣ, ಇವೆಲ್ಲಕ್ಕೆ ಅತೀತನು. ಪರಮಾತ್ಮನು ಕಣ್ಣಿನ ನೋಟಕ್ಕೆ ಅಗೋಚರನು. ಪಂಚೇಂದ್ರಿಯ ಹೊಂದಿದ ರೂಪ ಉಳ್ಳದ್ದು ನೋಟಕ್ಕೆ, ಸ್ಪರ್ಶಕ್ಕೆ ಸಿಲುಕುತ್ತದೆ. ದೇವನು ಪಂಚೇಂದ್ರಿಯ ವಿರಹಿತ ನಿರವಯನಾದ ಕಾರಣ ಅಗೋಚರನು. ಆದಿ ಮಧ್ಯ ಅವಸಾನ. ಅಂದರೆ ಸೃಷ್ಟಿ ಸ್ಥಿತಿ ಲಯ ಎಂಬ ಕ್ರಿಯೆಗಳಿಗೆ ಅತೀತನಾಗಿದ್ದಾನೆ. ದೇವನು ಸ್ವತಂತ್ರನೂ, ನಿತ್ಯನೂ ನಿರ್ಮಲ ಸ್ವರೂಪನೂ ಆಗಿದ್ದಾನೆ. ದೇವನಿಗೆ ಹುಟ್ಟು ಇಲ್ಲ. ಅವನು ಅಯೋನಿ ಸಂಭವನು.

1223. ದೇಹದಲ್ಲಿ ವಸ್ತು ಯಾವುದು.

ಅರಿವೆ ವಸ್ತುವೆಂಬರು, ಆ ಅರಿವ ಆತ್ಮವಿರಹಿತವಾಗಿ ಕಾಬವರೊಳರೆ ?
ಆತ್ಮನೆ ವಸ್ತುವೆಂಬರು; ಆ ಆತ್ಮವನು
ಪ್ರಾಣವಿರಹಿತರಾಗಿ ಕಾಬವರೊಳರೆ ?
ಆ ಪ್ರಾಣವನೆ ವಸ್ತುವೆಂಬರು; ಆ ಪ್ರಾಣವ
ದೇಹವಿರಹಿತನಾಗಿ ಕಾಬವರೊಳರೆ ?
ಅಥವಾ ಮೀರಿ ಕಂಡೆವೆಂದಡೆ, ಅವು ನಿರವಯ ವಸ್ತುಗಳು
'ಅದೃಶ್ಯಭಾವನೋ ನಾಸ್ತಿ' ಎಂಬ ಶ್ರುತಿಯ ವಿಚಾರಿಸಲು
ನಿರವಯವಾದವು ಭಾವಕ್ಕೆ ಬಾರವು
ಭಾವಕ್ಕೆ ಬಾರದವು ದೃಷ್ಟಿಗೆ ಗೋಚರಿಸವು.
ದೃಷ್ಟಿಗೆ ಗೋಚರಿಸದ ವಸ್ತುವ ಮುಟ್ಟಿ ಪೂಜಿಸಬಹುದೆ ?
ಪೂಜೆಗೆ ಬಾರದು.
ಅದು ಕಾರಣ, ಕಾಯದ ಸ್ಥಲವಿಡಿದು ನೋಡಲು
ಅರಿವು ಆತ್ಮ ಪ್ರಾಣಂಗಳು ಬೇರಿಲ್ಲ
ಅದು ಕಾರಣ, ಸಾಕಾರವಾದ ಇಷ್ಟಲಿಂಗವಿಲ್ಲದೆ
ಬಟ್ಟಬಯಲ ಜ್ಞಾನವೆ ವಸ್ತುವೆಂಬ ಕಷ್ಟದ ನುಡಿಯನೇನೆಂಬೆ ?
ದೃಗ್ದೃಶ್ಯವಾದ ಇಷ್ಟಲಿಂಗದ ಘನವ
ಲಿಂಗದೇವರಲ್ಲಿ ನೀನೆ ಬಲ್ಲೆಯಲ್ಲದೆ
ನಾನೆತ್ತ ಬಲ್ಲೆನಯ್ಯಾ ಚನ್ನಬಸವಣ್ಣಾ.

ವಸ್ತು ಎಂದರೆ ನಿತ್ಯವಾಗಿ ಸತ್ಯವಾಗಿ ಇರುವಂಥದು. ದೇಹದಲ್ಲಿ ವಸ್ತು ಯಾವುದು? ಕೆಲವರು ಅರಿವೆ ವಸ್ತು ಎನ್ನುತ್ತಾರೆ. ಅರಿವು ಎಂದರೆ ಪ್ರಜ್ಞೆ **consciousness.** ಆತ್ಮ **(soul)** ಇಲ್ಲದೆ ಅರಿವು ಇರಬಲ್ಲುದೆ ? ಆತ್ಮವೇ ಸತ್ಯವಾದ ವಸ್ತುವೆಂದು ಕೆಲವರು ಅನ್ನುವರು. ಆ ಪ್ರಾಣವು ದೇಹದ ಆಶ್ರಯವಿಲ್ಲದೆ ಇರಬಲ್ಲುದೆ? ಇವೆಲ್ಲವನ್ನು ದಾಟಿ ವಸ್ತುವನ್ನು ಕಾಣಬೇಕು ಎಂದರೆ ಇವೆಲ್ಲವೂ ನಿರವಯ ವಸ್ತುಗಳು. ನಿರವಯವಾದುವನ್ನು ಭಾವವು ಗ್ರಹಿಸಲು ಸಾಧ್ಯವಿಲ್ಲ. ಭಾವಕ್ಕೆ ಸಿಕ್ಕದವು ದೃಷ್ಟಿಗೆ ಗೋಚರಿಸುವುದಿಲ್ಲ. ದೃಷ್ಟಿಗೆ ಗೋಚರಿಸದ ವಸ್ತುವನ್ನು ಹೇಗೆ ತಾನೆ ಮುಟ್ಟಿ ಪೂಜಿಸಬಹುದು ? ಆದ್ದರಿಂದ ಇವೆಲ್ಲವುಗಳ ಸಮುಚ್ಚಯ ನಿಜವಾದ ವಸ್ತುವು ಶರೀರದ ಆಶ್ರಯದಲ್ಲಿ ಅರಿವು, ಆತ್ಮ, ಪ್ರಾಣಗಳು ಕೆಲಸ ಮಾಡುತ್ತವೆ. ಅದಕ್ಕಾಗಿ ಶರೀರಕ್ಕೆ ಧಾರಣೆ ಮಾಡಲು ಅಂಗಲಿಂಗ ಬೇಕೇ ಬೇಕು, ಸಾಕಾರವಾದ ಇಷ್ಟಲಿಂಗವಿಲ್ಲದೆ ಬಟ್ಟ ಬಯಲಿನ ಸ್ವರೂಪ ಹೊಂದಿರುವ ಪರಮಾತ್ಮನನ್ನು ಕಾಣಲು ಸಾಧ್ಯವಿಲ್ಲ. ನಮ್ಮ ದೃಷ್ಟಿಗೆ ದೃಶ್ಯವಾಗಿರುವ ಇಷ್ಟಲಿಂಗದ ಘನವ ಚನ್ನಬಸವಣ್ಣ ನೀನೇ ಬಲ್ಲೆಯಲ್ಲದೆ ನಾನೆತ್ತ ಬಲ್ಲೆನಯ್ಯಾ ?

1224. ಲಿಂಗದೇವನನ್ನು ಗೆಲ್ಲುವುದು ಹೇಗೆ ?

ಅಳಿವನಲ್ಲ, ಉಳಿಯವನಲ್ಲ, ಪ್ರಳಯವೆಂಬುದ ಮುನ್ನರಿಯನು.
ಕಳಾಕುಳರಹಿತನು, ಉಭಯಕುಳರಹಿತನು
ಅರಿವ ಬೈಚಿಟ್ಟು ಮೆರೆವ ಗಮನನಲ್ಲ
ಲಿಂಗದೇವನೆಂಬ ಶಬ್ದಮುಗ್ಧನ
ಭಾವದ ಬಳಲಿಕೆಯಲ್ಲಿ ಗೆಲಬಹುದೆ ಹೇಳಾ ?

ದೇವನು ನಾಶಹೊಂದುವವನಲ್ಲ, ಉಳಿಯಪೆಟ್ಟಿಗೆ ಸಿಗುವವನಲ್ಲ, ಪ್ರಳಯ–ನಾಶ ಎಂಬುದನ್ನು ಮೊದಲೇ ಅರಿಯನು. (ಕಳಾಕುಳ ರಹಿತನು, ಉಭಯ ಕುಳ ರಹಿತನು ಎಂಬ

ವಾಕ್ಯವು ಅರ್ಥವಾಗುತ್ತಿಲ್ಲ.) ಅರಿವು ಅಂದರೆ ಪ್ರಜ್ಞೆ(consciousness)ಯನ್ನು ಬಚ್ಚಿಟ್ಟುಕೊಂಡು ಒಂದೆಡೆಯಿಂದ ಇನ್ನೊಂದೆಡೆಗೆ ಚರಿಸುವವನಲ್ಲ. (ಆತ್ಮವು ಅರಿವನ್ನು ಬಚ್ಚಿಟ್ಟುಕೊಂಡು ಸಂಚರಿಸುವ ಅಲ್ಪಾತ್ಮ) ಪರಮಾತ್ಮನು ಶಬ್ದಮುಗ್ಧನು. ಅವನನ್ನು ಅನುಭಾವದಿಂದ ಕಾಣಬಹುದೇ ವಿನಾ ಭಾವದ ಬಳಲಿಕೆ (ಪರಿಶ್ರಮ)ಯಿಂದ ಗೆಲ್ಲಲಿಕ್ಕೆ ಸಾಧ್ಯವಿದೆಯೇ ?

1225. ದೇವರ ಕೃಪೆ ತಪ್ಪಿದರೆ ?

ಈರೇಳು ರತ್ನ, ಹದಿನೆಂಟು ಲಕ್ಷ ಗಜ,
ನಾರಿಯರು ನಾಲ್ಕು ಲಕ್ಷ ಮೂವತ್ತೆರಡು ಸಾವಿರ
ಮಕ್ಕಳು ಹದಿನಾರು ಲಕ್ಷ; ಅವರುಗಳೇರುವ ರಥಂಗಳು
ಸೂರ್ಯನ ರಥಕ್ಕೆ ಸರಿಮಿಗಿಲೆನಿಸುವ ರಥಂಗಳು
ಸಾಲದೆ, ಸಿರಿಗೆ ನೆಲೆಯೆನಿಸುವ ಅಸಂಖ್ಯಾತ ಪುರ
ಮೂರುವರೆಕೋಟಿ ಬಂಧುಗಳು
ಮೂವತ್ತೆಂಟು ಕೋಟಿ ಜಾತ್ಯಶ್ವ
ಇಪ್ಪತ್ತೆಂಟು ಕೋಟಿ ಮೈಗಾವಲ ವೀರಭಟರು
ಛಪ್ಪನ್ನದೇಶದ ರಾಯರುಗಳೆಲ್ಲರು ಕಪ್ಪಕಾಣಿಕೆಯ ತೆತ್ತುಬಹರು
ಲಿಂಗದೇವಾ, ನಿಮ್ಮ ಕೃಪೆ ತಪ್ಪಿದಲ್ಲಿ
ಆ ಸಗರ ಕಾರ್ತವೀರ್ಯರೊಂದು ಕ್ಷಣದಲ್ಲಿ ಮಡಿದರು.

ಜಗತ್ತಿನಲ್ಲಿಯೇ ಅಮೂಲ್ಯವಾದ ಹದಿನಾಲ್ಕು ರತ್ನಗಳು, ಹದಿನೆಂಟು ಲಕ್ಷ ಗಜ, ಮಹಿಳೆಯರು ನಾಲ್ಕು ಲಕ್ಷ ಮೂವತ್ತೆರಡು ಸಾವಿರ, ಅವರಿಗೆ ಮಕ್ಕಳು ಹದಿನಾರು ಲಕ್ಷ. ಅವರುಗಳು ಏರುವ ರಥಗಳು ಸೂರ್ಯನ ರಥಕ್ಕೆ ಸಮನಾದವು. ಶ್ರೀಮಂತಿಕೆಯಿಂದ ಕೂಡಿದ ಊರುಗಳು ಅಸಂಖ್ಯಾತ, ಅವರಿಗೆ ಮೂರುವರೆ ಕೋಟಿ ಬಂಧುಗಳು, ಮೂವತ್ತೆರಡು ಕೋಟಿ ಜಾತಿ ಕುದುರೆಗಳು, ಇಪ್ಪತ್ತೆಂಟು ಕೋಟಿ ಮೈಗಾವಲ ವೀರ ಭಟರು. ಅರವತ್ತ ನಾಲ್ಕು ದೇಶಗಳ ರಾಜರೆಲ್ಲ ಕಪ್ಪ ಕಾಣಿಕೆ ಕೊಡುತ್ತಿದ್ದರು. ಆದರೆ ಅವರು (ಗುರು)ದೇವರ ಕೃಪೆಯನ್ನು ಕಳೆದುಕೊಂಡ ಕಾರಣ ಸಗರರು ಮತ್ತು ಕಾರ್ತವೀರ್ಯ ಒಂದು ಕ್ಷಣದಲ್ಲಿ ನಾಶಹೊಂದಿದರು.

1226. ದೇವರು ಮಾಯಾವಿನಾಶಕ

ಆದಿ ಮಾಯೆಯಾಗಲಿ ಅನಾದಿ ಮಾಯೆಯಾಗಲಿ
ನಿಮ್ಮ ಪಾದದರ್ಶನದ ಮುಂದೆ ಅವಳ ಶಕ್ತಿಯೆ ?
ಅರಳೆಯ ಗಿರಿಗೆ ಅಣುವಗ್ನಿಯಾದಡೆ ದಹಿಸದಿರ್ಪುದೆ,
ಲಿಂಗದೇವಯ್ಯಾ ?

ಮಾಯೆ ಎನ್ನುವುದು ಒಂದು ತತ್ತ್ವ. ಪರಮಾತ್ಮನು ಸಾತ್ವಿಕ ಶಕ್ತಿಯಾದರೆ ಮಾಯೆಯು ಒಂದು ತಾಮಸ ಶಕ್ತಿ; ಕೆಟ್ಟುದರ ಸಮುಚ್ಚಯವೇ ಮಾಯೆ. ಅದು ಮನದ ಆಗಸವನ್ನು ಆವರಿಸಿಕೊಳ್ಳುವ ಒಂದು ಮೋಡದಂತೆ. ಆದರೆ ಮಾಯೆಯ ಪ್ರಭಾವ ದೇವರ ಶಕ್ತಿಯ ಮುಂದೆ ಏನೇನೂ ಅಲ್ಲ. ದೇವನ ಕೃಪೆಯಾದರೆ ಮಾಯೆ ಕರಗಿ ಹೋಗುವುದು. ಅರಳೆಯ ಬೆಟ್ಟವನ್ನು ಏರಿಸಿ ಒಂದು ಕಿಡಿ ಅಗ್ನಿಯನ್ನು ಸೋಂಕಿಸಿದರೆ ಅರಳೆಯು ಸುಟ್ಟು ಭಸ್ಮವಾಗುವಂತೆ ಮಾಯೆಯು ನಿವಾರಣೆಯಾಗುವುದು.

1227. ಲಿಂಗದೇವನೆಂದರೆ ಯಾರು ?

ಆತ್ಮನೇ ಲಿಂಗವೆಂಬರು
ಆತ್ಮನ ದೇಹರಹಿತನಾಗಿ ಕಾಬವರುಂಟೆ ?
ಪ್ರಾಣವೇ ಲಿಂಗವೆಂಬರು

ಪ್ರಾಣವನು ಕಾಯವ ಬಿಟ್ಟು ಬೇರೆ ಕಾಣಬಹುದೆ ?
ಅಥವಾ ಕಂಡಹೆವೆಂದಡೆ
ಅವು ನಿರವಯ ನಿರಾಕಾರವಾದುದು, ಭಾವಕ್ಕೆ ಬಾರದು
ಭಾವಕ್ಕೆ ಬಾರದುದ ಪೂಜಿಸಬಹುದೆ ?
ಅದು ಕಾರಣ, ಕಾಯದ ಕರಸ್ಥಲದಲ್ಲಿ ಕ್ರಿಯಾಲಿಂಗವಿಡಿದು ನೋಡಲು
ಪ್ರಾಣ, ಆತ್ಮನೆಂಬವು ಬೇರಿಲ್ಲ
ಇದು ಕಾರಣ, ಇಷ್ಟವ ಬಿಟ್ಟು ಬಟ್ಟಬಯಲೆ ವಸ್ತುವೆಂಬ
ಮಿಟ್ಟೆಯ ಭಂಡರ ಲಿಂಗದೇವನ ಶರಣರು ಮೆಚ್ಚರು.

ಸೃಷ್ಟಿಕರ್ತನಾದ ಪರಮಾತ್ಮ ಲಿಂಗದೇವನು ವಿಶ್ವಚೈತನ್ಯ. ಜೀವಾತ್ಮನು ಅಲ್ಪಭಾವಾಪನ್ನ; ಆತ್ಮವೇ ಲಿಂಗವಲ್ಲ. ಆತ್ಮವು ದೇಹದಲ್ಲಿ ಆಶ್ರಯಪಡೆದಿರುತ್ತದೆ. ದೇಹ ವಿರಹಿತವಾಗಿ ಆತ್ಮನನ್ನು ಕಾಣಲು ಸಾಧ್ಯವಿಲ್ಲ ಮತ್ತು ಕೆಲವರು ಪ್ರಾಣವೇ ಲಿಂಗದೇವ ಎನ್ನುವರು. ಪ್ರಾಣವೂ ಸಹ ದೇಹದ ಆಶ್ರಯದಲ್ಲೇ ಇರುವುದು. ಆತ್ಮವೇ ಇರಲಿ, ಪ್ರಾಣವೇ ಇರಲಿ. ಇವು ನಿರಾಕಾರ ವಸ್ತುಗಳು ಭಾವಕ್ಕೆ ಒಳಗಾಗವು. ಆದ್ದರಿಂದ ಶರೀರದ ಕರಸ್ಥಲದಲ್ಲಿ ಕ್ರಿಯಾ (ಇಷ್ಟ)ಲಿಂಗ ಹಿಡಿದು ಇದರ ಮೂಲಕ ಪ್ರಾಣ, ಆತ್ಮಗಳನ್ನು ಅನುಭವಿಸಬೇಕು. ಬಟ್ಟ ಬಯಲನ್ನು (space) ದೇವರು ಎನ್ನುವ ಜಡದ ಆರಾಧಕರನ್ನು ಲಿಂಗದೇವನ ಶರಣರು ಮೆಚ್ಚಿಕೊಳ್ಳುವುದಿಲ್ಲ.

1228. ಇಷ್ಟಲಿಂಗದಿಂದ ಎಲ್ಲವೂ ಪ್ರಸಾದ

ಕಂಗಳ ಮುಂದಣಿಂದ ಶ್ರೀಗುರುಲಿಂಗ ಹಿಂಗಿದಡೆ
ವ್ರತಕ್ಕೆ ಭಂಗವಾದುದೆಂದು ತಂದುಕೊಟ್ಟ ಶ್ರೀ ಗುರು
ಕರಸ್ಥಲದಲ್ಲಿ ಪ್ರಾಣಲಿಂಗವ
ಆ ಲಿಂಗ ಮುಟ್ಟಲೊಡನೆ
ತನು ಪ್ರಸಾದ, ಮನ ಪ್ರಸಾದ, ಧನ ಪ್ರಸಾದವಾಯಿತ್ತು
ಇಂತು ಸರ್ವಾಂಗ ಪ್ರಸಾದವಾಯಿತ್ತು ಲಿಂಗದೇವಾ.

ಗುರುವು ಲಿಂಗೈಕ್ಯನಾಗಬಹುದು; ಅಥವಾ ಧರ್ಮಪ್ರಚಾರಾರ್ಥ ಶಿಷ್ಯನಿಂದ ದೂರಹೋಗಬಹುದು. ಅದಕ್ಕಾಗಿ ತನ್ನ ಗುರುತಾಗಿ ಶಿಷ್ಯನಿಗೆ ಇಷ್ಟಲಿಂಗವನ್ನು ಅನುಗ್ರಹಿಸುವನು. ಅದನ್ನು ಇಟ್ಟುಕೊಂಡು ಶಿಷ್ಯನು ದಿನನಿತ್ಯವೂ ಗುರುಸ್ಮರಣೆ, ಇಷ್ಟಲಿಂಗಾರ್ಚನೆ ಮಾಡುತ್ತ ತನು–ಮನ–ಧನಗಳನ್ನು ಪ್ರಸಾದವಾಗಿ ಮಾಡಿಕೊಳ್ಳುವನು.

1229. ಜಂಗಮಾರ್ಚನೆ ಹೆಚ್ಚಿನದು

ಲಿಂಗಾರ್ಚನೆಯ ಮಾಡುವೆನಯ್ಯಾ ಜಂಗಮವೆನ್ನ ಮಠಕ್ಕೆ ಬರಬೇಕೆಂದು
ಆ ಜಂಗಮವೆನ್ನ ಮಠಕ್ಕೆ ಬಂದಡೆ
ಲಿಂಗಾರ್ಚನೆಯ ಮಾಡಿ ಜಂಗಮಾರ್ಚನೆಯ ಮಾಡುವೆನು
ಅದೇನು ಕಾರಣವೆಂದಡೆ
ಆ ಲಿಂಗದಲ್ಲಿ ಪದವುಂಟು, ಫಲವುಂಟು, ಭವವುಂಟು
ಆ ಜಂಗಮದಲ್ಲಿ ಪದಂ ನಾಸ್ತಿ, ಫಲಂ ನಾಸ್ತಿ
ಭವಂ ನಾಸ್ತಿಯಾದ ಕಾರಣ
ಲಿಂಗದೇವಯ್ಯಾ, ನಾನಿನ್ನು ಭವಭವಾಂತರದಲ್ಲಿ
ನಿಮ್ಮ ಜಂಗಮಾರ್ಚನೆಯ ಮಾಡುವೆನು.

ಇಷ್ಟಲಿಂಗಾರ್ಚನೆಯನ್ನು ಮಾಡುತ್ತೇನೆ ಒಂದು ಸಂಕಲ್ಪದೊಡನೆ ; ಆ ಸಂಕಲ್ಪವೇನೆಂದರೆ ಜಂಗಮವು ಎನ್ನ ಮಠಕ್ಕೆ ಬರಬೇಕೆಂದು. ಆ ಜಂಗಮವೆನ್ನ ಮಠಕ್ಕೆ ಬಂದರೆ

ನಾನು ಲಿಂಗಾರ್ಚನೆಯ ಮಾಡಿಕೊಂಡು, ಜಂಗಮಕ್ಕೂ ಲಿಂಗಾರ್ಚನೆಯ ಮಾಡಿಸಿ, ನಂತರ ಜಂಗಮಾರ್ಚನೆಯ ಮಾಡುತ್ತೇನೆ. ಲಿಂಗದಲ್ಲಿ ಪದ ಉಂಟು, ಫಲ ಉಂಟಿ, ಭವವುಂಟು. ಜಂಗಮದಲ್ಲಿ ಫಲವಿಲ್ಲ. ಪದವಿಲ್ಲ. ಭವವಿಲ್ಲ. ಆದ್ದರಿಂದ ಲಿಂಗದೇವಾ, ನಾನು ಇನ್ನು ಮುಂದೆ ಅನಂತ ಜನ್ಮ ಬಂದರೂ ನಾನು ಜಂಗಮಾರ್ಚನೆಯನ್ನೇ ಮಾಡುತ್ತೇನೆ.

1230. ಜಂಗಮವೇ ಅನಾದಿ

ಆದಿ ಭಕ್ತ ಅನಾದಿ ಜಂಗಮ
ಆದಿ ಶಕ್ತಿ; ಅನಾದಿ ಶಿವನು ನೋಡಾ ।
ಎನ್ನ ಆದಿಪಿಂಡಕ್ಕೆ ನೀನೆ ಆಧಾರವಾಗಿ ತೋರಿದಡೆ
ಎನ್ನ ಹೃದಯಕಮಲದಲ್ಲಿ ನಿಮ್ಮ ಕಂಡೆನು
ಆ ಕಾಂಬ ಜ್ಞಾನವೆ ಜಂಗಮ
ಆ ಜಂಗಮವಿಡಿದಲ್ಲದೆ ಗುರುವ ಕಾಣಬಾರದು
ಆ ಜಂಗಮವಿಡಿದಲ್ಲದೆ ಲಿಂಗವ ಕಾಣಬಾರದು
ಆ ಜಂಗಮವಿಡಿದಲ್ಲದೆ ಪ್ರಸಾದವ ಕಾಣಬಾರದು
ಕಾಯ ಭಕ್ತ, ಪ್ರಾಣ ಜಂಗಮವೆಂಬ ವಚನವ ತಿಳಿಯಲು
ಎನ್ನ ಪ್ರಾಣ ನೀವಲ್ಲದೆ ಮತ್ತಾರು ಹೇಳಯ್ಯಾ
ಇದು ಕಾರಣ, ನಿಮ್ಮ ಘನವ ಕಿರಿದುಮಾಡಿ
ಎನ್ನನೊಂದು ಘನವ ಮಾಡಿ ನುಡಿವಿರಿ ಲಿಂಗದೇವಾ.

ಮೊದಲು ಜಂಗಮ ನಂತರ ಭಕ್ತ. ಜ್ಞಾನಿಯಾದ ಜಂಗಮನಿಂದ ಭಕ್ತನ ಉದಯ ವಿಸ್ತಾರ. ಶಿವ ತತ್ತ್ವ ಮೊದಲು ಶಕ್ತಿ ತತ್ತ್ವ ನಂತರ. ಹೀಗಾಗಿ ಭಕ್ತ ಎಂಬ ನನ್ನ ಆದಿ ಪಿಂಡಕ್ಕೆ ಪ್ರಭುವೆಂಬ ಜಂಗಮವೇ ಆಧಾರವಾಗಿ ತೋರಿದಡೆ, ನನ್ನ ಹೃದಯ ಕಮಲದಲ್ಲಿ ನೀವೆ ನೆಲೆಸಿದ್ದೀರಿ. ನೀವು ಸಾಕಾರ ಸ್ವರೂಪವಾಗಿದ್ದಡೆ ನನ್ನ ಅರಿವಾಗಿ ನೀವು ನಿರಾಕಾರ ಸ್ವರೂಪವಾಗಿದ್ದೀರಿ. ದೀಕ್ಷಾಗುರು, ಇಷ್ಟಲಿಂಗ ಮತ್ತು ಪ್ರಸಾದ ಇವೆಲ್ಲವಕ್ಕೂ ಜಂಗವವೇ ಆದಿ. ಭಕ್ತ ಜಂಗಮ ಸಂಬಂಧ ಹೇಗಿರುವುದೆಂದರೆ ಭಕ್ತನು ಶರೀರದಂತೆ ಜಂಗಮವು ಪ್ರಾಣದಂತೆ. ಹೀಗಾಗಿ ನನ್ನ ಪ್ರಾಣವು ನೀವೇ ಆಗಿದ್ದೀರಿ. ಹೀಗಿರುವಾಗ ಪ್ರಭುದೇವರೇ ನಿಮ್ಮ ಹಿರಿಮೆಯನ್ನು ಕಿರಿದಾಗಿ ಮಾಡಿ ನನ್ನನ್ನು ಹಿರಿದಾಗಿಸಿ ನುಡಿಯುತ್ತಿದ್ದೀರಿ. ಇದು ಸರಿಯೆ ?

ಪ್ರಭುದೇವರನ್ನು ಕುರಿತು ಈ ವಚನದಲ್ಲಿ ಪ್ರಸ್ತಾಪ ಬಂದಿಲ್ಲವಾದರೂ ವಚನದ ಭಾವವನ್ನು ಗ್ರಹಿಸಿದಾಗ ವಚನದಲ್ಲಿ ಬಂದಿರುವ ಜಂಗಮ ಮತ್ತಾರೂ ಆಗಿರದೆ ಅಲ್ಲಮಪ್ರಭುವೇ ಎಂಬುದು ಸ್ಪಷ್ಟವಾಗುತ್ತದೆ.

1231. ಗುರುವಿನ ಗುರು ಜಂಗಮ

ಆದಿ ಲಿಂಗ ಅನಾದಿ ಜಂಗಮ
ಆ ಜಂಗಮಕ್ಕೆ ಮಾಡಿದಡೆ, ಪರಮಾನಂದ ಸುಖವಯ್ಯಾ
ಗುರುವಿಂಗೆ ಪರಮಗುರು ಜಂಗಮವೆಂದುದು
ಲಿಂಗದೇವಯ್ಯನ ವಚನ.

ಜಂಗಮನು ಮೊದಲಿಗೆ, ನಂತರ ಇಷ್ಟಲಿಂಗ. ಜ್ಞಾನಿಯಾದ ಜಂಗಮನಿಂದ ಇಷ್ಟಲಿಂಗವನ್ನು, ದೀಕ್ಷೆಯನ್ನು, ಕರುಣ ಪ್ರಸಾದವನ್ನು ಪಡೆಯುವುದು ಪರಮಾನಂದ ಸುಖ. ಏಕೆಂದರೆ ಗುರುವಿಂಗೆ ಪರಮಗುರು ಜಂಗಮ. ದೀಕ್ಷಾಗುರು ಸಾಮಾನ್ಯ ಜ್ಞಾನವಂತನಾದರೆ ಜಂಗಮನು ವಿಶೇಷ ಜ್ಞಾನಿ. ಅವನ ಒಡನಾಟವೇ ಪರಮಭಾಗ್ಯ.

1232. ಜಂಗಮಸೇವೆ ಬಹಳ ಮಹತ್ವಪೂರ್ಣ.

ಅನುದಿನದಲ್ಲಿ ಮಜ್ಜನಕ್ಕೆರೆದು ನೆನೆದು ಲಿಂಗ ಕರಿಗಟ್ಟಿತ್ತು.
ನೀರನೊಲ್ಲದು, ಬೋನವ ಬೇಡದು, ಕರೆದಡೆ ಓ ಎನ್ನದು
ಸ್ಥಾವರ ಪೂಜೆ ಜಂಗಮದ ಉದಾಸೀನ
ಲಿಂಗದೇವಯ್ಯನೊಲ್ಲ ನೋಡಾ !

ದಿನ ನಿತ್ಯವೂ ಇಷ್ಟಲಿಂಗಕ್ಕೆ ಮಜ್ಜನಕ್ಕೆ ಎರೆಯಲಾಗುವುದು. ಆ ನೀರನ್ನು ಎರೆದು ಇಷ್ಟಲಿಂಗವು ಗಟ್ಟಿಯಾಗಿ ಬಿಡುವುದು. ಅದಕ್ಕೆ ನೀರನ್ನು ಎರೆಯದೆ ಇದ್ದರೆ ಅದೇನು ತಾನಾಗಿ ಬೇಡದು ; ಹಸಿವಾಯಿತೆಂದು ಅದು ಬೋನವನ್ನು ಬೇಡುವುದಿಲ್ಲ; ಕರೆದಡೆ ಓ ಎಂದು ಮಾರ್ದನಿಗೊಡದು. ಆದರೆ ಜಂಗಮ ಹಾಗಲ್ಲ. ಹಸಿವಾದಡೆ ಬೋನವನ್ನು ಬೇಡುವನು; ಬಾಯಾರಿಕೆಯಾದರೆ ಕುಡಿಯಲು ಕೇಳುವನು. ಭಕ್ತನು ಕರೆದಾಗ ಸ್ಪಂದಿಸಿ, ಓ ಎನ್ನುವನು. ಆದ್ದರಿಂದ ಭಕ್ತನು ಕೇವಲ ಸ್ಥಾವರವಾದ ಇಷ್ಟಲಿಂಗದ ಪೂಜೆಯಲ್ಲಿಯೇ ಮೈಮರೆಯುತ್ತ ಜಂಗಮ ಚೈತನ್ಯವನ್ನು ಉದಾಸೀನ ಮಾಡಿದರೆ ಲಿಂಗದೇವನು ಮೆಚ್ಚಿಕೊಳ್ಳನು.

ಜಂಗಮವೆಂದರೆ ಕೇವಲ ಜ್ಞಾನಿಗಳು, ಮಠಾಚಾರ್ಯರು ಎಂದು ಇಲ್ಲಿ ಅರ್ಥವಿಸದೆ ಸಮಾಜ, ಸಮುದಾಯ; ಜಂಗಮ ಚೈತನ್ಯವೆಂದರೆ ಸೇವೆ, ಸಹಾಯಗಳ ಆವಶ್ಯಕತೆ-ಯಲ್ಲಿರುವವರು ಎಂದು ಅರ್ಥವಿಸಬೇಕು. ದೇವರ ಸಾಕಾರ ರೂಪವೇ ಸಮಾಜ, ಸಮಾಜ ಸೇವೆಯೇ ಜಂಗಮ ಸೇವೆ ಎಂದು ಅರ್ಥ ಮಾಡಬೇಕು. ಇಷ್ಟಲಿಂಗವು ಸ್ಥಾವರ, ಕೇವಲ ಅದರ ಪೂಜೆಯಲ್ಲಿಯೆ ತಲ್ಲೀನರಾಗಬಾರದು ಎಂದರೆ ಅದರ ಅರ್ಥ ಇಷ್ಟಲಿಂಗ ಪೂಜಿಸಬಾರದು ಎಂದು ಆಗುವುದಿಲ್ಲ. ಒಂದೊಂದು ವಚನದಲ್ಲಿ ಒಂದು ಭಾವಕ್ಕೆ ಒತ್ತು ಕೊಡಲಾಗುವುದು. ಇದು ಕೇವಲ ಏಕದೇಶೀಯವಾಗಿರುವುದು.

1233. ಜಂಗಮಕ್ಕೆ ನಿರಪೇಕ್ಷ ಮನೋಭಾವದಿಂದ ಮಾಡಬೇಕು.

ಜಂಗಮಕ್ಕೆ ಮಾಡಿ ಗತಿಯ ಪಡೆದಿಹೆನೆಂಬ
ಬೆವಹಾರದ ಭಕ್ತರು ನೀವು ಕೇಳಿರಯ್ಯಾ ;
ಜಂಗಮಕ್ಕೆ ಮಾಡಿ, ಗತಿಯ ಪಡೆದೆಹೆನೆಂಬ
ಭಕ್ತಿವ್ಯರ್ಥರು ನೀವು ಕೇಳಿರಯ್ಯಾ ;
ಅಗ್ನಿಮುಖದಲ್ಲಿ ಪಾಕವಾದ ಸಸಿ ತೆನೆಯಪ್ಪುದೆ ?
ಶಶಿಧರಂಗೆ ಮಾಡಿದಡೆ ಫಲವಪ್ಪುದು.
ಆ ಫಲದಾಯಕನೆ ಮರಳಿ ಭವಕ್ಕೆ ಬಹನು
ಜಂಗಮಕ್ಕೆ ಮಾಡಿದಡೆ ಫಲವಿಲ್ಲ, ಮರಳಿ ಭವವಿಲ್ಲ,
ಕಿಚ್ಚಿನ ಕಣಜದಲ್ಲಿ ಬೀಜವ ತುಂಬಿ
ಬಿತ್ತುವ ದಿನಕ್ಕರಸಿದಡುಂಟೆ ಲಿಂಗದೇವಾ ?

ಜಂಗಮಕ್ಕೆ ಮಾಡುವುದು ನೀಡುವುದು ಫಲಾಪೇಕ್ಷೆಯಿಂದಲ್ಲ. ಪುಣ್ಯದ ಅಪೇಕ್ಷೆಯಿಂದಲೂ ಅಲ್ಲ. ಸ್ವರ್ಗ ಪಡೆಯುವ ಹಂಬಲದಿಂದಲೂ ಅಲ್ಲ. ಸದ್ಗತಿ ಪಡೆಯುವ ಹಂಬಲದಿಂದ ಮಾಡಿದರೆ ಮುಂದೆ ಜನ್ಮ ಜನ್ಮಾಂತರಗಳುಂಟು. ಪುಣ್ಯದ ಫಲಾಪೇಕ್ಷೆಯಿಂದ ಮಾಡಿದರೆ ಅವರು ವ್ಯವಹಾರದ ಭಕ್ತರು. ತಾವು ಮಾಡಿದ ಜಂಗಮ ಸೇವೆ ಪ್ರತಿಯಾಗಿ ಫಲವನ್ನು ಪ್ರಚಾರವನ್ನು ಕೀರ್ತಿಯನ್ನು ಬಯಸುವವರು ಇವರು. ಇವರು ಭಕ್ತಿವ್ಯರ್ಥರು. ಬೆಂಕಿಯಲ್ಲಿ ಕುದಿದ ಸಸಿ ಬೆಳೆದು ತೆನೆ ಕೊಡುವುದಿಲ್ಲ. ಶಿವನನ್ನು ಆರಾಧಿಸಿ ಪ್ರತಿಫಲವಾಗಿ ಕೆಲವರು ಕೈಲಾಸವನ್ನು ಪಡೆದರು. ಪುಣ್ಯ ತೀರುವ ತನಕ ಕೈಲಾಸವಾಸಿಯಾಗಿರುವ ಈ ಫಲಾಪೇಕ್ಷೆ ಶಿವಭಕ್ತರು ಪುನಃ ಭೂಮಿಯಲ್ಲಿ ಹುಟ್ಟಿಬರುವರು. ಆದರೆ ಫಲಾಪೇಕ್ಷೆ ಬಯಸದೆ, ಕೀರ್ತಿವಾರ್ತೆ ಬಯಸದೆ

ಮಾಡುವ ಜಂಗಮಸೇವೆ ಪುನಃ ಭವಕ್ಕೆ ಬೀಳಿಸುವುದಿಲ್ಲ ಬೆಂಕಿಯ ಕಣಜದಲ್ಲಿ ಬೀಜವನ್ನು ತುಂಬಿ ಬಿತ್ತುವ ದಿನಕ್ಕೆ ಅದನ್ನು ಹುಡುಕಿದರೆ ಸಿಗಲು ಸಾಧ್ಯವೆ ? ಪಾಪ ಪುಣ್ಯಗಳ ಬೀಜ ಹುರಿಯಲ್ಪಡುವುದರಿಂದ ಪುನಃ ಜನ್ಮ ತಾಳುವ ಭಯವಿರುವುದಿಲ್ಲ.

1234. ಜಂಗಮದ ದರ್ಶನ ಮಹಾಭಾಗ್ಯ.

ಜಂಗಮವೆ ಲಿಂಗವೆಂಬ ಭಾವ ಫಲಿಸಿದಡೆ
ಇಂದಿನ ಪುಣ್ಯಕ್ಕೆ ಸರಿಯುಂಟೆ ?
ಲಿಂಗದ ಒಡಲ ಮನೆಮಾಡಿಪ್ಪ ಜಂಗಮವೆನ್ನ ಕಣ್ಣಮುಂದೆ ಸುಳಿದಡೆ
ಇಂದೆನ್ನ ಭಾಗ್ಯಕ್ಕೆ ಕಡೆಯಿಲ್ಲ.
ಆ ಜಂಗಮವೆ ದಿಟಕ್ಕೆನ್ನ ಮನೆಗೆ ಬಂದಡೆ
ಸಲುಗೆಯ ವರವ ಹಡೆವೆನು ಕಾಣಾ ಲಿಂಗದೇವರಲ್ಲಿ
ಚನ್ನಬಸವಣ್ಣಾ ನೀನಹುದೆನಲಿಕೆ.

ಈ ವಚನದ ಹಿಂದೆ ಒಂದು ಚಿತ್ರ ಮೂಡುತ್ತದೆ. ಅದೆಂದರೆ, ಗುರು ಬಸವಣ್ಣನವರು ಇಷ್ಟಲಿಂಗಾರ್ಚನೆಯಲ್ಲಿ ತಲ್ಲೀನರಾಗಿದ್ದಾರೆ. ಆಗ ಸಿದ್ಧರಾಮೇಶ್ವರರ ಜೊತೆಯಲ್ಲಿ ಅಲ್ಲಮ ಪ್ರಭುಗಳು ಬರುತ್ತಾರೆ. ಇಂತಿಷ್ಟು ಸಮಯ ಇಷ್ಟಲಿಂಗಾರ್ಚನೆ ಎನ್ನುವ ನಿಯಮ ಹೊಂದಿದ್ದ ಗುರು ಬಸವಣ್ಣನವರು ಅಲ್ಲಮಪ್ರಭುಗಳನ್ನು ಸ್ವಾಗತಿಸಲು ಚನ್ನಬಸವಣ್ಣನವರಿಗೆ ಹೇಳುತ್ತಾರೆ.

ಚನ್ನಬಸವಣ್ಣಾ, ಜಂಗಮವು ಲಿಂಗದೇವನ ಸಾಕಾರ ರೂಪು ಎಂದು ನಾನು ಹೇಳುತ್ತಲೇ ಇದ್ದೇನೆ. ಆ ತತ್ತ್ವವು ಇಂದು ಫಲಿಸುತ್ತಿದೆ. ದೇವರನ್ನು ತನ್ನ ಒಡಲಲ್ಲಿ ತುಂಬಿಕೊಂಡ ಜಂಗಮವು ಇಂದು ನಮ್ಮ ಕಣ್ಣೆದುರು ಸಂಚರಿಸುತ್ತಲಿದೆ. ಹೀಗಾಗಿ ನನ್ನ ಭಾಗ್ಯಕ್ಕೆ ಎಲ್ಲೆಯೇ ಇಲ್ಲ. ಇಂಥ ಜಂಗಮವು ನಿಜವಾಗಿಯೂ ನನ್ನ ಮನೆಗೆ ಬಂದಡೆ ಅವರ ಸೇವೆ ಮಾಡಿ ನಿನಗೆ ಮೆಚ್ಚುಗೆಯಾಗುವಂತೆ ವರವನ್ನು, ಅನುಗ್ರಹವನ್ನು ಪಡೆಯುತ್ತೇನೆ.

1235. ಶೂನ್ಯ ದೇಹಿ

ಇದ್ದ ಪರಿ ಇಂತುಟಿದೆ ನೋಡಯ್ಯಾ :
ನಿಂದಡೆ ನೆಳಲಿಲ್ಲ; ನಡೆದಡೆ ಹೆಜ್ಜೆಯಿಲ್ಲ.
ಭೂತಳದೊಳಗೆ ಕಂಡುದಿಲ್ಲ
ಇಂತಪ್ಪ ಅನಿಯಮದ ಸುಳುಹು
ಅಹುದಹುದು, ಅರಿದರಿದು
ಜಂಗಮಸ್ಥಲ ಇಂತುಟಲ್ಲದೆ, ಎಂತುಂಟು ಹೇಳಾ ?
ಆಪ್ಯಾಯನದ ಅರಿಕೆಯ ಹೊಲಬು ಕಾಣಬಾರದು
ಊಡಿಸಿದಡೆ ಉಂಬನೋ ಉಣ್ಣನೋ ?
ಉಂಬಂಥವರಾದಡೆ ನೀಡುವೆ ಲಿಂಗದೇವರಿಗೆ
ಚನ್ನಬಸವಣ್ಣಾ, ನೀನಹುದಹುದೆನಲಿಕೆ.

ಅಲ್ಲಮ ಪ್ರಭುದೇವರು ಬಂದ ಮೇಲೆ ಶೂನ್ಯ ಪೀಠಾರೋಹಣ ಜರುಗುವುದು. ಅನುಭವ ಮಂಟಪದಲ್ಲಿ ಒಂದು ಶೂನ್ಯ ಪೀಠವನ್ನು ಸ್ಥಾಪಿಸಿ ಸೂಕ್ತ ವ್ಯಕ್ತಿಯ ಬರವಿಗಾಗಿ ಗುರು ಬಸವಣ್ಣನವರು ಕಾಯುತ್ತಿರುತ್ತಾರೆ. ಅಂಥ ಜ್ಞಾನ-ವೈರಾಗ್ಯಗಳ ಸಂಗಮವಾದ ಪ್ರಭುದೇವರು ಬಂದಾಗ ಆನಂದದಿಂದ ಉದ್ಗಾರ ತೆಗೆಯುತ್ತಾರೆ. ಬಂದಿರುವ ಜಂಗಮದ ಪರಿಯನ್ನು ನೋಡಿರಿ. ನಿಂತರೆ ನೆಳಲು ಬೀಳುವುದಿಲ್ಲ. ನಡೆದರೆ ಹೆಜ್ಜೆ ಮೂಡುವುದಿಲ್ಲ. ಅಂತಹ ಶೂನ್ಯದೇಹಿ. ಇಡೀ ಭೂಮಿಯಲ್ಲಿ (ಭೂತಳ) ಇಂಥ ವ್ಯಕ್ತಿ ಕಾಣಸಿಗುವುದಿಲ್ಲ. ಸಾಮಾನ್ಯ ನಿಯಮವನ್ನು ಮೀರಿದ ಸುಳಿವು. ನಿಜವಾದ ಜಂಗಮನು ಈತನೆ ! ಅಂತಹ ಅದ್ಭುತವಾದ ವ್ಯಕ್ತಿತ್ವ. ಹಸಿವಿನ ಲಕ್ಷಣ

ಕಾಣದು. ಊಟ ಮಾಡಿಸಿದರೆ ಮಾಡುವನೋ ಇಲ್ಲವೋ ಎಂಬ ಸಂದೇಹ ಬರುತ್ತಿದೆ. ಹಸಿವು-ತೃಷೆಗಳ ಜಂಜಡವನ್ನು ಮೀರಿದವನಾಗಿದ್ದಾನೆ. ಚನ್ನಬಸವಣ್ಣ ನೀನು ಮೆಚ್ಚಿಕೊಳ್ಳುವಂತೆ ನಾನು ಪ್ರಭುದೇವರಿಗೆ ಊಟೋಪಚಾರವನ್ನು ಮಾಡಿಸುತ್ತೇನೆ.

1236. ಲಿಂಗ ಜಂಗಮಾರ್ಚನೆಯ ಮರ್ಮ.

ಶ್ರೀ ಗುರು ಲಿಂಗವನೆ ಅಂಗದ ಮೇಲೆ ಬಿಜಯಂಗೆಯ್ಸಿದನಾಗಿ
ಆ ಲಿಂಗಕ್ಕೆ ನಾನು ಅಷ್ಟವಿಧಾರ್ಚನೆ, ಷೋಡಷೋಪಚಾರಗಳ ಮಾಡಿ
ಚತುರ್ವಿಧ ಫಲಪದ ಪುರುಷಾರ್ಥವ ಪಡೆದು
ಆ ಪರಿಭವಕ್ಕೆ ಬರಲೊಲ್ಲದೆ,
ನಾನು ನಿಷ್ಕಳವೆಂಬ ಹೊಲದಲ್ಲಿ ಒಂದು ನಿಧಾನವ ಕಂಡೆ
ಆ ನಿಧಾನದ ಹೆಸರಾವುದೆಂದಡೆ :
ತ್ರೈಲಿಂಗದ ಆದಿ ಮೂಲಾಂಕುರನೊಂದಾದ ಚರಲಿಂಗವೆಂದು
ಆ ಚರಲಿಂಗದ ಪಾದಾಂಬುಜವ ತಂದೆನ್ನ ಇಷ್ಟಲಿಂಗದ
ಚತುರ್ವಿಧ ಫಲಪದಪುರುಷಾರ್ಥವೆಂಬ ಕರಂಗಳಂ ತೊಳೆವೆ
ಆ ಚರಲಿಂಗದ ಪ್ರಸಾದವ ತಂದೆನ್ನ ಇಷ್ಟಲಿಂಗದ
ಜೀವಕಳೆಯ ಮಾಡುವೆ.
ಆ ಲಿಂಗವೆ ಲಿಂಗ, ಅಂಗವೆ ಲಿಂಗ
ಆ ಲಿಂಗವೆ ಪ್ರಾಣ, ಆ ಪ್ರಾಣ ಲಿಂಗವಾದುದು.
ಇದು ಚತುರ್ವಿಧಫಲಪುರುಷಾರ್ಥವ ಮೀರಿದ ಘನವು.
ಲಿಂಗದೇವಯ್ಯಾ, ಈ ದ್ವಯದ ಪರಿಯ ನಿಮ್ಮ ಶರಣನೆ ಬಲ್ಲ !

ಶ್ರೀ ಗುರು ಇಷ್ಟಲಿಂಗಕ್ಕೆ ಚಿತ್ಕಳೆ ತುಂಬಿ ಶರೀರದ ಮೇಲೆ ಧಾರಣ ಮಾಡಿದನು. ಅಂಥ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ, ಷೋಡಷೋಪಚಾರಗಳನ್ನು ಮಾಡಿ ಕೇವಲ ಚತುರ್ವಿಧ ಫಲ, ಲೌಕಿಕ ಪುರುಷಾರ್ಥಗಳನ್ನು ಪಡೆಯುತ್ತ ಪುನಃ ಪುನಃ ಜನ್ಮವನ್ನು ತಾಳಲು ಹೋಗದೆ ನಾನು ನಿರಪೇಕ್ಷೆ ಎಂಬ ಹೊಲದಲ್ಲಿ ಒಂದು ನಿಧಾನವ ಕಂಡೆ. ಆ ಸಂಪತ್ತಿನ ಹೆಸರು ಏನೆಂದರೆ ಚರಲಿಂಗ ಅರ್ಥಾತ್ ಜಂಗಮ. ಆ ಜಂಗದ ಪಾದವನ್ನು ತೊಳೆದು ಆ ಪಾದಾಂಬುವಿನಿಂದ ಇಷ್ಟಲಿಂಗಕ್ಕೆ ಮಜ್ಜನಕ್ಕೆ ಎರೆಯುತ್ತೇನೆ. ನಂತರ ಆ ಕರುಣೋದಕ, ಕರುಣಪ್ರಸಾದವನ್ನು ತಂದು ನನ್ನ ಇಷ್ಟಲಿಂಗದ ಮೇಲೆ ಎರೆದು ಜೀವಕಳೆಯ ಮಾಡುವೆ. ಆ ಲಿಂಗದ ಚೈತನ್ಯ ನನ್ನ ಸರ್ವಾಂಗದಲ್ಲಿ ಅಂಗವಿಸಿ, ನನ್ನ ಶರೀರವೇ ಲಿಂಗಮಯವಾಗುವಂತೆ ಮಾಡುವೆ. ದೇವನನ್ನು ನನ್ನ ಪ್ರಾಣವಾಗಿ ಮಾಡಿಕೊಂಡು ಪ್ರಾಣವು ದೈವೀಕರಣಗೊಳ್ಳುವಂತೆ ಮಾಡುವೆ ಈ ಸ್ಥಿತಿ ಬಹಳ ಅಮೂಲ್ಯವಾದುದು.

"ಚತುರ್ವಿಧ ಫಲಗಳಾದ ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯ ಎಂಬ ಪದಗಳಾಗಲಿ, ಧರ್ಮ-ಅರ್ಥ-ಕಾಮ-ಮೋಕ್ಷಗಳೆಂಬ ಪುರುಷಾರ್ಥಗಳಾಗಲೀ ಇವನ್ನು ಪಡೆಯುವದಕ್ಕಿಂತಲೂ ಮಿಗಿಲಾದ ಸ್ಥಿತಿ. ಹೀಗೆ ಅಂಗ ಪ್ರಾಣಗಳನ್ನು ದೈವೀಕರಿಸುವ ಸಾಧನೆಯನ್ನು, ಮಹತ್ವವನ್ನು ನಿಮ್ಮ ಶರಣನು ಬಲ್ಲ" ಎನ್ನುತ್ತಾರೆ ಗುರು ಬಸವಣ್ಣನವರು.

ಈ ವಚನದಲ್ಲಿ ಅಭಿವ್ಯಕ್ತವಾಗಿರುವವು ಎರಡು ಅಂಶಗಳು. 1. ನಿರಾಕಾರ ಲಿಂಗದೇವನ ಸಾಕಾರ ಜಂಗಮ. ಜಂಗಮನನ್ನು ಕರೆದು ಲಿಂಗಾರ್ಚನೆ ಮಾಡಿಸಲು ಅನುವು ಮಾಡಿಕೊಡುವುದಲ್ಲದೆ ಅವನ ಪಾದಾರ್ಚನೆ ಮಾಡಬೇಕು. ನಂತರ ಆ ಪಾದೋದಕವನ್ನು ಭಕ್ತನು ಇಷ್ಟಲಿಂಗದ ಮೇಲೆ ಎರೆದು ಸ್ವೀಕರಿಸಬೇಕು. ಹೀಗೆ ಮಾಡುವ ಉದ್ದೇಶ ಇಷ್ಟಲಿಂಗಕ್ಕೆ ಜೀವಕಳೆ (**Recharge vitality**) ತುಂಬುವುದಾಗಿರುತ್ತದೆ. ಆದಿ ಶರಣರ ಕಾಲದಲ್ಲಿ ಅಂಥ ಯೋಗ್ಯ ಜಂಗಮರು ಸಿಗುತ್ತಿದ್ದರು. ಅವರ ಪಾದೋದಕ ತೆಗೆದುಕೊಳ್ಳುವುದರಲ್ಲಿ ಅರ್ಥವಿರುತ್ತಿತ್ತು. ಈಗಿನ

ಕಾಲದಲ್ಲಿ ಯೋಗ್ಯರು ಸಿಗುವುದು ದುರ್ಲಭ. ಅದಕ್ಕಾಗಿ ಪಾದೋದಕವನ್ನು ಇಷ್ಟಲಿಂಗಕ್ಕೆ ಎರೆಯುವುದನ್ನು ನಿಷೇಧಿಸಲಾಗಿದೆ. ಹಸ್ತೋ(ಮಂತ್ರೋ)ದಕ ಮಾತ್ರ ಎರೆಯುವುದನ್ನು ರೂಢಿಗೆ ತರಲಾಗಿದೆ. ಎರಡನೆಯ ಕಾರಣ. ಇಷ್ಟಲಿಂಗವು ಸೃಷ್ಟಿಕರ್ತನ ಸಂಕೇತ. ಸೃಷ್ಟಿಕರ್ತನನ್ನು ಅತ್ಯುನ್ನತ ಸ್ಥಾನದಲ್ಲಿಟ್ಟು ಗೌರವಿಸಬೇಕು. ಇದೊಂದು ಕುರುಹು ಎಂದು ಉದಾಸೀನದಿಂದ ಕಾಣಬಾರದು. ರಾಷ್ಟ್ರಧ್ವಜವು ದೇಶದ ಸಂಕೇತ. ಅದನ್ನೊಂದು ಬಟ್ಟೆಯ ತುಂಡು ಎಂದು ಭಾವಿಸುವುದಿಲ್ಲ. ಅದಕ್ಕೆ ಅವಮಾನ ಮಾಡಿದರೆ ದೇಶಕ್ಕೆ ಅವಮಾನವಾಯಿತೆಂದು ಪ್ರತಿಭಟಿಸಲಾಗುತ್ತದೆ. ಹಾಗೆ ಇಷ್ಟಲಿಂಗಕ್ಕೆ ಅವಮಾನವಾದರೆ ದೇವರಿಗೆ ಅವಮಾನವಾದಂತೆ ಎಂದು ಭಾವಿಸಬೇಕು. ಅದಕ್ಕಾಗಿ ಗುರು-ಜಂಗಮರು ಪಾದೋದಕವನ್ನು ಭಕ್ತರ ಇಷ್ಟಲಿಂಗದ ಮೇಲೆ ಎರೆಯದೆ ಮಂತ್ರೋದಕವನ್ನು ಹಸ್ತದ ಮೂಲಕ ಮಾಡಿ ಎರೆಯಬೇಕು. ವಿಶೇಷ ಸಂದರ್ಭಗಳಲ್ಲಿ, ಗುರುಗಳು ಪಾದಪೂಜೆ ಮಾಡಿಸಿಕೊಂಡು ಶಿಷ್ಯರಿಗೆ (ವಟುಗಳಿಗೆ) ಪಾದೋದಕ ಕೊಡಬಹುದು.

ಆಧುನಿಕ ಕಾಲದಲ್ಲಿ ವಿದ್ಯಾವಂತರು ಪಾದೋದಕ ತೆಗೆದುಕೊಳ್ಳಲು ಹಿಂಜರಿಯುತ್ತಾರೆ. ಲಿಂಗೋದಕ ಅಥವಾ ಹಸ್ತೋದಕವನ್ನು ಕೊಡುವ ಅಭ್ಯಾಸ ಮಾಡಿಕೊಳ್ಳಬೇಕು.

1. ಲಿಂಗೋದಕ : ಇಷ್ಟಲಿಂಗಪೂಜೆ ಮಾಡಿ ತಾವು ತೀರ್ಥತೆಗೆದುಕೊಳ್ಳುವ ಮೊದಲೇ ಇಷ್ಟಲಿಂಗದ ಮೇಲೆ ನೀರನ್ನು ಎರೆದು ತೀರ್ಥ ತೆಗೆದು ಕರುಣೋದಕವಾಗಿ ನೀಡುವುದು.

2. ಹಸ್ತೋ(ಮಂತ್ರೋ)ದಕ : ಇಷ್ಟಲಿಂಗ ಪೂಜೆ ಇಲ್ಲದೆ ಇರುವಾಗ, ಬರಿ ಪಾದಪೂಜೆಗೆ ಆಹ್ವಾನಿಸಿದಾಗ ಹಸ್ತೋದಕ ಮಾಡಬೇಕು. ಐದೂ ಬೆರಳಿಗೆ ವಿಭೂತಿ ಧರಿಸಿ 12 ಬಾರಿ 'ಓಂ ಶ್ರೀ ಗುರುಬಸವಲಿಂಗಾಯನಮಃ' ಮಂತ್ರವನ್ನು 12 ಬಾರಿ ಗಣ್ಣಿಗೆ ಒಂದು ಬಾರಿಯಂತೆ ಪಠಿಸಿ, ಬೆರಳುಗಳನ್ನು ಎದ್ದಿ ಮಂತ್ರೋದಕವಾಗಿ ಮಾಡಬೇಕು.

1237. ರಂಗವಾಲೆ ಸೊಗಸದು

ರಂಗವಾಲೆ ಎಂದರೆ ಅಂಗವಿಸದಯ್ಯಾ ಎನ್ನ ಮನವು.
ಷಡುಸಮ್ಮಾರ್ಜನೆಯೆಂದಡೆ ಸೊಗಸದಯ್ಯಾ ಎನ್ನ ಮನಕ್ಕೆ
ಅದೇನು ಕಾರಣವೆಂದಡೆ ಭಕ್ತರಂಗಳ ವಾರಣಾಸಿಯೆಂದುದಾಗಿ,
ತಾ ಹುಟ್ಟಿ ತಮ್ಮವ್ವೆಯ ಬಂಜೆಯೆನ್ನಬಹುದೆ, ಲಿಂಗದೇವಾ.

ಧರ್ಮಪಿತ ಬಸವಣ್ಣನವರಿಗೆ ರಂಗವಾಲೆ (ರಂಗೋಲಿ) ಏಕೋ ಇಷ್ಟವಾಗುತ್ತಿಲ್ಲ. ರಂಗೋಲೆ ಪುಡಿಯಿಂದ ಅನೇಕ ಚಿತ್ತಾರಗಳನ್ನು ಅಂಗಳದಲ್ಲಿ ಬಿಡಿಸುವರು. ನೋಡಲು ಚಂದವಾಗಿ ಏನೋ ಕಾಣುವುದು. ಆದರೆ ಗಾಳಿ ಬೀಸುತ್ತಲೇ ಆ ಪುಡಿಯು ಹಾರಿ ಹೋಗಿ ಚಿತ್ತಾರವು ಕೆಟ್ಟುಹೋಗುವುದಲ್ಲದೆ ನೆಲವು ಅಂದಗೆಡುವುದು. ಕಾಲಿಗೆಲ್ಲ ಪುಡಿಯು ಅಂಟಿಕೊಳ್ಳುವುದು. ಬಹುಶಃ ಅದಕ್ಕೆ ಇಷ್ಟಪಡುತ್ತಿಲ್ಲ ಎಂದುಕೊಳ್ಳಬಹುದು. (ಕೆಲವರು ಗುರು-ಜಂಗಮರನ್ನು ಸ್ವಾಗತಿಸುವಾಗ ನೆಲದ ಮೇಲೆ ಮಂತ್ರವನ್ನು, ಷಟ್ಕೋನ-ಧರ್ಮಲಾಂಛನವನ್ನು ರಂಗೋಲಿಯಿಂದ ಬರೆಯುವರು. ತುಳಿದಾಡುವ ಜಾಗದಲ್ಲಿ ಹೀಗೆ ಪವಿತ್ರ ಲಾಂಛನ ಬರೆಯಬಾರದು.)

ಧರ್ಮಪಿತರಿಗೆ ಷಡುಸಮ್ಮಾರ್ಜನೆ ಎಂದರೆ ಸೊಗಸೆನಿಸದು. ಸಮ್ಮಾರ್ಜನೆ ಎಂದರೆ ನೆಲವನ್ನು ಗುಡಿಸುವುದು, ತೊಳೆಯುವುದು, ಸಾರಿಸುವುದು. ನಾವು ಸಣ್ಣವರಿದ್ದಾಗ ನೋಡುತ್ತಿದ್ದೆವು ಮನೆಯಲ್ಲಿ ಯಾರಾದರೂ ತೀರಿ ಹೋದರೆ, ಹಬ್ಬಗಳು ಬಂದರೆ ಗೋಡೆಗೆ ಸುಣ್ಣ ಬಳಿಯುತ್ತಲಿದ್ದರು, ನೆಲವನ್ನು ಸಗಣಿಯಿಂದ ಸಾರಿಸುತ್ತಿದ್ದರು. ಈ ರೀತಿ ಬಾರಿಬಾರಿಗೆ ಸಾರಿಸುವುದು, ಬಳಿಯುವುದು ಇದರಲ್ಲಿ ಮಡಿಮಾಡುತ್ತೇವೆ ಎಂಬ ಭ್ರಾಂತಿ ಇದ್ದುದರಿಂದ ಗುರು ಬಸವಣ್ಣನವರು ಇಷ್ಟಪಟ್ಟಂತೆ ಕಾಣುವುದಿಲ್ಲ.

ಭಕ್ತರ ಮನೆಯ ಅಂಗಳವೇ ವಾರಣಾಸಿಯಂತೆ, ಅದು ಭಕ್ತಿ-ಜ್ಞಾನಗಳ ದಿವ್ಯ ಸಂಗಮ ತಾನು ಒಬ್ಬ ತಾಯಿಯ ಮಗನಾಗಿ ಜನಿಸಿ ತಮ್ಮ ತಾಯಿಯನ್ನು ಬಂಜೆ ಎಂದರೆ ಅದು ಎಷ್ಟು

ಹಾಸ್ಯಾಸ್ಪದವೋ ಹಾಗೆ ನೆಲವನ್ನು ಗುಡಿಸಿ-ಸಾರಿಸಿ ಶುದ್ಧಮಾಡುತ್ತೇವೆ ಎಂಬುದು ಹಾಸ್ಯಾಸ್ಪದ.

1238. ಸಂಸಾರ ಯೋಗಿ

ಕುಶಲ ಭಕ್ತ ಮಾಯೆಯ ಪಿಡಿದು ಮಹಂತನ ಕಾಣಲಸಾಧ್ಯವೆ ?
ತನ್ನಂಗದ ಕರದಲ್ಲಿ ಪಾಷಾಣವಿಡಿದು ಪರಮನ ಕಾಣ್ಬಂತೆ
ನಾ ಕಾಣ್ಬೆ ಕಾಣಾ, ಲಿಂಗದೇವಯ್ಯ.

ಅನುಭವ ಮಂಟಪದಲ್ಲಿ ಬಹುಶಃ ಒಂದು ದಿವಸ ಚರ್ಚೆ ನಡೆದಂತೆ ತೋರುತ್ತದೆ. ಸಂಸಾರದಿಂದ ಸದ್ಗತಿಯೋ, ಸನ್ಯಾಸದಿಂದಲೋ? ಸಂಸಾರಿಯಾಗಿಯೂ ಅಧ್ಯಾತ್ಮಿಕ ಸಾಧನೆ ಮಾಡಲು ಸಾಧ್ಯವೇ? ದೇವರ ಸಾಕ್ಷಾತ್ಕಾರ ಸಾಧ್ಯವೇ? ಸ್ತ್ರೀ ಎಂದರೆ ಮಾಯೆಯಲ್ಲವೆ ? ಈ ಪ್ರಶ್ನೆಗಳಿಗೆ ಗುರು ಬಸವಣ್ಣನವರು ಉತ್ತರ ಕೊಟ್ಟ ಮಹತ್ವಪೂರ್ಣ ವಚನವಿದು. ಕುಶಲ ಭಕ್ತ ಅಂದರೆ ವಿವೇಕಿಯೂ ಜಾಣನೂ ಆದ ಭಕ್ತನು ಮಾಯೆಯನ್ನು ಅರ್ಥಾತ್ ಹೆಂಡತಿಯನ್ನು ಒಡಗೂಡಿಯೇ ಮಹಾಂತನನ್ನು ಅಂದರೆ ದೇವರನ್ನು ಕಾಣಲು ಅಸಾಧ್ಯವೆ ? ತನ್ನ ಶರೀರದ ಕೈಯಲ್ಲಿ ಇಷ್ಟಲಿಂಗವಿಟ್ಟುಕೊಂಡು ಪರಮಾತ್ಮನನ್ನು ಕಾಣುವಂತೆ, ನಾನು ಈ ಸಂಸಾರವನ್ನು ಸಾಧನವಾಗಿ ಮಾಡಿಕೊಂಡು ಲಿಂಗದೇವನನ್ನು ಕಾಣುವೆ.

1239. ನಿರಾಕಾರ ಪ್ರಸಾದ

ರೂಪಿಲ್ಲದ ಸಯದಾನವ ನೀಡುವೆ
ರುಚಿಯಿಲ್ಲದ ಪದಾರ್ಥವ ಮಥನಿಸದೆ ನೀಡುವೆ
ಲಿಂಗಕ್ಕೆಂದು ಲಿಂಗಪದಾರ್ಥವನಂಗಮುಖವ
ಮರೆದು ನಿಮಗೆ ನೀಡುವೆ
ಕಾಮಿಸದೆ ಕಲ್ಪಿಸದೆ ಭಾವಿಸದೆ ಭ್ರಮಿಸದೆ ನಿಮ್ಮ ಪರಿಯಾಣಕ್ಕೆ ನೀಡುವೆ
ಸುಚಿತ್ತ ಸಮಾಧಾನದಿಂದ ಅವಧರಿಸಬೇಕಯ್ಯಾ
ಲಿಂಗದೇವಯ್ಯ.

ಹೊರಗಿನ ದವಸ ಧಾನ್ಯಗಳಿಗೆ ರೂಪವಿದೆ. ನಿರಾಕಾರವಾದ ಪದಾರ್ಥಕ್ಕೆ ರೂಪವಿಲ್ಲ. ಅಂಥ ಪದಾರ್ಥವನ್ನು ನಾನು ನೀಡುವೆ. ಮಾಡಿಟ್ಟ ಅಡಿಗೆಗೆ ರುಚಿ ಇರುತ್ತದೆ. ನಾನು ಅರ್ಪಿಸುವ ಪ್ರಸಾದ ರುಚಿಗೆ ಅತೀತವಾದುದು. ದೇವಾ, ನಿನಗೆಂದು ನಾನು ಅಂಗಗುಣಗಳನ್ನು ಮರೆತು ಅರ್ಪಿಸುವೆನು. ಕಾಮಿಸದೆ ಅಂದರೆ ಆಸೆಯಿಂದ ಇಷ್ಟಪಡದೆ, ಭ್ರಾಂತಿಯಿಂದ ಕಲ್ಪಿಸದೆ, ಅನವಶ್ಯಕವಾಗಿ ಭಾವಿಸದೆ, ಭ್ರಮಿಸದೆ ನಿಮ್ಮ ತಟ್ಟೆಗೆ ನೀಡುತ್ತೇನೆ. ಲಿಂಗದೇವಾ ನೀನು ಸುಚಿತ್ತದಿಂದ, ಸಮಾಧಾನದಿಂದ ನಾನು ನೀಡಲಿರುವ ಪ್ರಸಾದವನ್ನು ಸ್ವೀಕರಿಸು. ಇಲ್ಲಿ ನೀಡುತ್ತಿರುವುದು ಭೌತಿಕ ಬಾಯಿಯಿಂದ ಉಣ್ಣುವ ಪ್ರಸಾದವಲ್ಲ. ಮಾನಸಿಕವಾಗಿ ನೀಡುತ್ತಿರುವ ನಿರವಯ ಪ್ರಸಾದ.

1240. ಸಗುಣ ಸಾಕ್ಷಾತ್ಕಾರ

ಎನ್ನ ಶಿರ ನಿಮ್ಮ ಚರಣವೊರಸೊರಸಿ ಬೆರಸಿ ಭೇದವಿಲ್ಲಯ್ಯಾ
ಎನ್ನ ಕಾಯದ ಕಪಟ, ಎನ್ನ ಮನದ ವಿಕಾರ
ನಿಮ್ಮ ಅಂಗುಷ್ಟದ ಮೊನೆಯ ಸೋಂಕಲೊಡನೆ
ಹರಿದುದು ನೋಡಯ್ಯಾ ಕೂಡಲಸಂಗಮದೇವಯ್ಯಾ
ನಿಮ್ಮ ಶ್ರೀಪಾದದ ಬೆಳಗ ಕಂಡು
ಎನ್ನ ಅಂತರಂಗದ ಕತ್ತಲೆ ಓಡಿತ್ತು.

ಸಾಧಕ ಜೀವಿ ಬಸವಣ್ಣನವರಿಗೆ ಶಿವನ ಸಾಕಾರ ರೂಪದ ಸಗುಣ ಸಾಕ್ಷಾತ್ಕಾರವಾಗಿದೆ. ಅವರ ಎದುರು ತ್ರಿನೇತ್ರನು ನಿಂತಾಗ ಅವರ ಹರ್ಷ ಮೇರೆವರಿದು ಚರಣದ ಮೇಲೆ ತಲೆಯನ್ನು ಇಡುತ್ತಾರೆ, ಆನಂದ ಬಾಷ್ಪ ಹರಿಸುತ್ತಾರೆ. ಆಗ ತಮ್ಮ ಕಾಯದ ಕಪಟ, ಮನದ ವಿಕಾರ ತೊಲಗಿ ಹೋಯಿತೆಂದು ಹರ್ಷಿಸುತ್ತಾರೆ. ಶಿವನ ಪಾದದ ಬೆರಳ ತುದಿ ಸೋಂಕುತ್ತಿದ್ದಂತೆಯೇ ಶರೀರದಲ್ಲಿ

ಮಿಂಚು ಹರಿದಂತಾಗಿ ಅದ್ಭುತ ಬದಲಾವಣೆಯಾಯಿತೆಂದು ಸಂಭ್ರಮಿಸುತ್ತಾರೆ. ಬೆಳಕಿನ ಸ್ವರೂಪದಲ್ಲಿ ದರ್ಶನವಾಗಿ ಅಂತರಂಗದ ಕತ್ತಲೆಯಾದ ತಳಮಳ, ಉದ್ವಿಗ್ನತೆ ಅಡಗಿ ಹೋಗುತ್ತದೆ.

1241. ಭಕ್ತರೇ ಪಾಲಕರು, ಒಡೆಯರು

ಕೆಳಗೇಳು ಲೋಕ ಮೇಲೇಳು ಲೋಕ
ಇಂತೀ ಹದಿನಾಲ್ಕು ಲೋಕಕ್ಕೆ ನೀನೊಡೆಯ
ನಿನಗೆನ್ನ ಪಾಲಕರು ಭಕ್ತರೊಡೆಯರು
ನಮ್ಮವರಿಂದ ನಿನ್ನ ಸೂತಕ ಹೋಯಿತ್ತಲ್ಲದೆ
ನಿನ್ನಿಂದ ಒಂದು ತೃಣ ಮಡಿಯದು ಕಾಣಾ, ಲಿಂಗದೇವಾ

ಕೆಳಗೆ ಏಳು ಲೋಕ, ಮೇಲೆ ಏಳು ಲೋಕ-ಹೀಗೆ ಹದಿನಾಲ್ಕು ಲೋಕಗಳಿಗೆ ಲಿಂಗದೇವಾ ನೀನು ಒಡೆಯ. ಆದರೆ ನಿನ್ನ ಪಾಲಕರು, ಒಡೆಯರು ಯಾರು ಗೊತ್ತೆ? ಭಕ್ತರು! ನಿನಗೆ ಮಜ್ಜನಕ್ಕೆರೆದು, ಅಲಂಕರಿಸಿ, ನೈವೇದ್ಯವನ್ನು ಕೊಡುವವರು ಅವರೇ ಆದ ಕಾರಣ ಅವರೇ ನಿನ್ನ ಪಾಲಕರು. ನಮ್ಮ ಶರಣರು, ಭಕ್ತರಿಂದ ನಿನ್ನ ಮೈಲಿಗೆ ಹೋಯಿತಲ್ಲದೆ ನಿನ್ನಿಂದ ಒಂದು ಹುಲ್ಲುಕಡ್ಡಿಯೂ ಸಾಯದು. ಇದು ಭಕ್ತನ ಹಿರಿಮೆಯನ್ನು ವ್ಯಂಗ್ಯವಾಗಿ ಸಾರುವ ದೇವನನ್ನು ಮೂದಲಿಸುವ ಭಾಷೆಯಲ್ಲಿದೆ.

1242. ಶರಣರ ನಿಲುವು ಅಸಾಮಾನ್ಯ

ಅಯ್ಯಾ ನಿಮ್ಮ ಶರಣರ ನಿಲವ
ಸ್ವರ್ಗ ಮರ್ತ್ಯ ಪಾತಾಳದೊಳಗೆ ಬಲ್ಲವರಿಲ್ಲವಯ್ಯಾ
ಅಘಟಿತ ಘಟಿತರು, ಅಖಂಡಿತ ಭಾವುಕರು ! ಲಿಂಗದೇವಾ.
ನಿಮ್ಮ ಶರಣರ ನಿಲವನರಿವಡೆ ನಾನೇತರವನಯ್ಯ ?

ಶರಣರ ವ್ಯಕ್ತಿತ್ವ ಅಮೋಘವಾದುದು, ಉಪಮಾತೀತ, ಶಬ್ದಗಳಿಂದ ಬಣ್ಣಿಸಲು ಸಾಧ್ಯವಿಲ್ಲದಂತಹುದು. ಸ್ವರ್ಗ-ಮರ್ತ್ಯ-ಪಾತಾಳದೊಳಗೆ ಅವರನ್ನು ತಿಳಿದುಕೊಳ್ಳುವವರು ಸಿಗುವುದಿಲ್ಲ. ವಿಶೇಷವಾದ, ಅನೂಹ್ಯ ಘಟನೆಗಳನ್ನು ಪ್ರತ್ಯಕ್ಷ ಮಾಡುವರು. ಮಹಿಮೆಯುಳ್ಳವರು, ನಿರ್ಲಿಪ್ತವಾದ ಮನಃಸ್ಥಿತಿಯುಳ್ಳವರು. ಯಾವುದಕ್ಕೂ ಅಂಟಿಕೊಳ್ಳದ ಭಾವ ಉಳ್ಳವರು. ಇಂಥ ಶರಣರ ನಿಲುವನ್ನು ಅರಿಯಲು ನಾನು ಎಷ್ಟರವನು ?

1243. ಭಕ್ತರಲ್ಲದವರ ಬೇಡದಿರು.

ಬೇಡದಿರು ಬೇಡದಿರು ಶಿವಭಕ್ತರಲ್ಲದವರ ಬೇಡಿ ಬೋಡಾಗದಿರು
ಬೇಡಿದಡೆ ಹುರುಳಿಲ್ಲ.
ಬೇಡಿದ ಕೈಗೆ ಕಡೆಯಿಲ್ಲದೆ ಕೊಡಬಲ್ಲರು
ಲಿಂಗದೇವನ ಶರಣರು.

'ಬೇಡದಿರು' ಎಂದು ಗುರು ಬಸವಣ್ಣನವರು ಹೇಳುತ್ತಿರುವುದು ಒಂದನೆಯದಾಗಿ ತಮ್ಮ ಮನಸ್ಸಿಗೆ, ಎರಡನೆಯದಾಗಿ ಬಹುಶಃ ಜಂಗಮರಿಗೆ. ಅವರು ಸಾರ್ವಜನಿಕ ಕೆಲಸದಲ್ಲಿ ತಲ್ಲೀನರಾಗಿದ್ದರಿಂದ ಶರಣರನ್ನು ಬೇಡಿ, ಪಡೆದು ಸಮಾಜಸೇವೆ ಮಾಡುತ್ತಿದ್ದಿರಬಹುದು. ಶರಣರು ಕೇಳಿಸಿಕೊಂಡು ಕೊಡುವವರೂ ಅಲ್ಲ. ಅವರು ಕರ್ತವ್ಯ ಪ್ರಜ್ಞೆಯಿಂದ ಸ್ವಯಂ ಪ್ರೇರಿತರಾಗಿ ಕೊಡುವವರು. ಬೇಡುವುದಾದರೆ ಭಕ್ತರನ್ನು ಬೇಡಬೇಕು. ಏಕೆಂದರೆ ಭಕ್ತರಿಗೆ ದೇವರಲ್ಲಿ ನಂಬಿಕೆ ಇರುತ್ತದೆ, ದಾನ ಮಾಡುವುದರಲ್ಲಿ ಆಸಕ್ತಿ ಇರುತ್ತದೆ. ಅದೇ ಲೌಕಿಕ (ಭುಕ್ತ)ರಿಗೆ ವೈಭೋಗ-ವಿಲಾಸಗಳಲ್ಲಿ ಆಸಕ್ತಿ ಇರುವುದೇ ವಿನಾ ದಾನ ಮಾಡುವುದರಲ್ಲಿ ಇರದು. ಎಷ್ಟಿದ್ದರೂ ತಮ್ಮ ವೈಭವ ವಿಲಾಸಗಳಿಗೇ ವ್ಯಯಿಸುವರು. ಹೀಗಾಗಿ ಅವರನ್ನು ಬೇಡುವುದು ವ್ಯರ್ಥ. ಲಿಂಗದೇವನ ಶರಣರು ಹಾಗಲ್ಲ ತಮ್ಮ ಬಳಿ ಇದ್ದಷ್ಟರಲ್ಲಿಯೇ ಕೊಟ್ಟು, ಹಂಚಿಕೊಂಡು ತಿನ್ನುವರು. ಭಕ್ತರಿಗೆ ಹಂಚಿ ತಿನ್ನುವ ಸಂಸ್ಕಾರವಿರುತ್ತದೆ.

1244. ಸೇವೆಯೇ ದೇವರನ್ನೊಲಿಸುವ ಸಾಧನ

ಆಕಾಶವ ಮೀರುವ ತರುಗಿರಿಗಳುಂಟೆ ?
ಪ್ರತಿ ದೃಷ್ಟಿಯಾಗಿ ಮಾಡಬಲ್ಲಡೆ ಅದೇ ಮಾಟ
ಲಿಂಗದೇವರ ಕೂಡುವ ಕೂಟ.

ಆಕಾಶವನ್ನು ಮೀರಿ ಬೆಳೆಯುವ ಗಿಡಮರಗಳಾಗಲಿ, ಬೆಟ್ಟ ಗುಡ್ಡಗಳಾಗಲೀ ಇರುವುದಿಲ್ಲ. ಅದೇ ರೀತಿ ದಾಸೋಹವನ್ನು ಮೀರಿದ ಮತ್ತೊಂದು ಸಾಧನೆಯಿಲ್ಲ. ಲಿಂಗದೇವನ ಸಾಮರಸ್ಯಕ್ಕೆ ದಾಸೋಹವೇ ಸಾಧನೆ.

ಕಾಯಕದಷ್ಟೆ ಮಹತ್ವಪೂರ್ಣವಾದ ಮತ್ತೊಂದು ತತ್ತ್ವ ದಾಸೋಹ. ದಾಸೋಹ ಎಂದರೆ ಊಟ ಮಾಡಿಸುವುದು ಎಂಬ ಕ್ಷೀಣಾರ್ಥದಲ್ಲಿ ಇಂದು ಬಳಕೆಯಾಗುತ್ತಲಿದೆ. ದಾಸ+ಅಹಂ=ದಾಸೋಹಂ. ದೇವನೇ ಎಲ್ಲದರ ಒಡೆಯ. ನಾನು ಅವನ ಸೇವಕ, ದಾಸ ಎಂಬ ಭಾವವನ್ನು ಬೆಳೆಸಿಕೊಂಡು ವ್ಯಕ್ತಿಯು ಸಮಷ್ಟಿಯ ಸೇವೆ ಮಾಡುವುದೇ ದಾಸೋಹ. ಇಂಥ ದಾಸೋಹವೇ ದೇವರನ್ನೊಲಿಸುವ ಸಾಧನ !

1245. ಶರಣರ ಒಡನಾಟ

ಕುಂಡಲಿಗನೊಂದು ಕೀಡೆಯ ತಂದು
ತನ್ನಂತೆ ಮಾಡಿತಲ್ಲಾ, ಎಲೆ ಮಾನವಾ.
ಕೇಳಿ ನಂಬಯ್ಯಾ, ನೋಡಿ ನಂಬಯ್ಯಾ, ಎಲೆ ಮನವಾ
ಲಿಂಗದೇವನ ಶರಣರ ಅನುಭಾವ
ಇದರಿಂದ ಕಿರುಕುಳವೆ, ಎಲೆ ಮಾನವ.

ಕುಂಡಲಿಗ ಎಂಬ ಕೀಟವು ಒಂದು ಹಸಿರು ಹುಳುವನ್ನು ತಂದು ಮಣ್ಣಿನ ಗೂಡಿನಲ್ಲಿ ಇಡುವುದು. ನಂತರ ಆ ಮಣ್ಣಿನ ಗೂಡನ್ನು ಒಡೆದುಕೊಂಡು ಹುಳುವು ತಾನೂ ಒಂದು ಕೀಟವಾಗಿ ಹೊರಬರುವುದು. ಈ ಪ್ರಸಂಗವನ್ನು ಕೇಳಿಯಾದರೂ ನಂಬು, ನೋಡಿಯಾದರೂ ನಂಬು. ಹಾಗೆ ಅನುಭವ ಮಂಟಪವೆಂಬ ಅರಲಿನ ಗೂಡಿನಲ್ಲಿ ಸಾಧಕರೆಂಬ ಹುಳುಗಳನ್ನಿಟ್ಟು ಶರಣರೆಂಬ ಕುಂಡಲಿಗಗಳು ಸಿದ್ಧಪುರುಷರನ್ನಾಗಿ ಪರಿವರ್ತಿಸುತ್ತಾರೆ. ಒಂದು ಕುಂಡಲಿಗದಂತಹ ಕ್ಷುದ್ರ ಕೀಟವು ಹುಳುವನ್ನು ಕೀಡೆಯನ್ನಾಗಿ ಪರಿವರ್ತಿಸಬಲ್ಲುದು ಎಂದಾಗ ಶರಣರ ಅನುಭಾವದ ಒಡನಾಟ ಬದ್ಧಾತ್ಮನನ್ನು ಶುದ್ಧಾತ್ಮನನ್ನಾಗಿ ಮಾಡಲಾರದೆ ? ಶರಣರ ಅನುಭಾವ ಕುಂಡಲಿಗನ ಕ್ರಿಯೆಗಿಂತಲೂ ಕನಿಷ್ಠವೆ ?

ಬಾಗಲಕೋಟ ರಾಷ್ಟ್ರೀಯ ಬಸವದಳದ 26ನೆಯ ವಾರ್ಷಿಕೋತ್ಸವ

ಬಾಗಲಕೋಟ –30 ಬಸವ ಧರ್ಮಪೀಠ ಕೂಡಲಸಂಗಮ ಆಶ್ರಯದ ರಾಷ್ಟ್ರೀಯ ಬಸವ ದಳದ 26ನೆಯ ವಾರ್ಷಿಕ ಸಮಾರಂಭವು ದಿನಾಂಕ 30–6–2013 ರವಿವಾರ ಸಾಯಂಕಾಲ 5ಗಂಟೆಗೆ ಸರಿಯಾಗಿ ವಿಜೃಂಭಣೆಯಿಂದ ಜರುಗಿತು.

ಸಮಾರಂಭದ ಅಂಗವಾಗಿ ಪ್ರಥಮದಲ್ಲಿ ಬಸವ ಮೂರ್ತಿಯ ಪೂಜೆ, ಬಸವ ಧ್ವಜಾರೋಹಣ, ದೀಪ ಬೆಳಗಿಸುವ ಕಾರ್ಯಕ್ರಮಗಳು ಪೂಜ್ಯ ಶ್ರೀ ಮಾತೆ ಮಹಾದೇವಿಯವರು ಹಾಗು ಪೂಜ್ಯ ಶ್ರೀ ಬಸವಕುಮಾರ ಸ್ವಾಮೀಜಿಯವರಿಂದ ಜರುಗಿದವು.

ನಂತರ ಲಿಂಗೈಕ್ಯ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮೀಜಿಯವರ 19ನೆಯ ಸಂಸ್ಮರಣೆ ಪ್ರಯುಕ್ತ ಸ್ವಾಮೀಜಿಯವರ ಅಲ್ಪ ಪರಿಚಯವು ಶರಣೆ ಶೋಭಾ ಹಲ್ಯಾಳ ಇವರಿಂದ ಮಾಡಲ್ಪಟ್ಟಿತು. ಗೌರವಾಧ್ಯಕ್ಷರಾದ ಶರಣ. ಎಸ್.ಎಸ್.ಅಂಗಡಿಯವರು ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿದರು. ಶರಣೆಯರಿಂದ ಹೂವಸೂರ‍್ಯಾಡೋಣ ಎಂಬ ಭಕ್ತಿಗೀತೆಯೊಂದಿಗೆ ಪುಷ್ಪಾರ್ಚನೆ ಜರುಗಿತು. ತದನಂತರ ಶರಣ. ಎಸ್.ಬಿ.ಉಳ್ಳೇಗಡ್ಡಿಯವರಿಂದ ಸರ್ವರಿಗೂ ಸ್ವಾಗತ ಕೋರಲಾಯಿತು. ನಂತರ ಪೂಜ್ಯ ಮಾತಾಜಿಯವರಿಗೆ ಗುರುವಂದನೆ ಹಾಗೂ ರೂ.50011 ರೂ.ಗಳ ಕಾಣಿಕೆ ಸಮರ್ಪಣೆಯನ್ನು ಶರಣೆ.ವ್ಹಿ.ಡಿ.ಹಾಲಪ್ಪನವರು ಮಾಡಿದರು. ಪೂಜ್ಯ ಮಾತಾಜಿಯವರು ಬಸವಕಲ್ಯಾಣದಲ್ಲಿ ವಿಶ್ವದ ಪ್ರಪ್ರಥಮ 108 ಅಡಿಯ ಬಸವ ಮೂರ್ತಿಯನ್ನು ಲೋಕಾರ್ಪಣೆಯನ್ನು ಮಾಡಿದ್ದಕ್ಕಾಗಿ ಸನ್ಮಾನ ಪೂರಕವಾಗಿ ಅಭಿನಂದನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಬಾಗಲಕೋಟ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಹಾಗೂ ಮಾಹಿತಿ ತಂತ್ರಜ್ಞಾನ ಖಾತೆಯ ಸಚಿವರಾಗಿ ಸ್ಥಾನ ಪಡೆದ ಪ್ರಯುಕ್ತ ಶರಣ. ಶ್ರೀ ಎಸ್.ಆರ್.ಪಾಟೀಲ ಅವರನ್ನು ಹಾಗೂ ಶರಣ ಶ್ರೀ ಎಚ್.ವಾಯ್. ಮೇಟಿಯವರು ಬಾಗಲಕೋಟೆ ಮತಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ಪ್ರಯುಕ್ತ ಇಬ್ಬರನ್ನೂ ಸನ್ಮಾನಿಸುವ ಕಾರ್ಯಕ್ರಮ ನಡೆಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಪೂಜ್ಯ ಶ್ರೀ ಬಸವ ಕುಮಾರಸ್ವಾಮೀಜಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶರಣ ಜಿ.ಎಸ್.ಪಾಟೀಲರು ಆಗಮಿಸಿದ್ದರು. ಅಲ್ಲದೆ ಶರಣ ಪ್ರಕಾಶ್ ತಪಶೆಟ್ಟಿ ಶರಣ ಅಜಯಕುಮಾರ್ ಸರನಾಯಕ ಹಾಗೂ ಪೂಜ್ಯ ಶ್ರೀ ಬಸವಗೀತಾ ಮಾತೆಯವರು ಸಮಾರಂಭದ ಅತಿಥಿಗಳಾಗಿ ಆಗಮಿಸಿದ್ದರು. ನೇತೃತ್ವವನ್ನು ಪೂಜ್ಯ ಶ್ರೀ ಬಸವರಾಜ ಸ್ವಾಮೀಜಿಯವರು ವಹಿಸಿದ್ದರು. ಸಮಾರಂಭದಲ್ಲಿ ಅತಿಥಿಗಳಿಗೆ ಹಾಗೂ ಪರಸ್ಥಳದ ರಾಷ್ಟ್ರೀಯ ಬಸವ ದಳದ ಶರಣರಿಗೆ ಹಾಗೂ ರಾಷ್ಟ್ರೀಯ ಬಸವ ದಳದ ಸಮಿತಿಯ ಸದಸ್ಯರಿಗೆ ಮಾಲಾರ್ಪಣೆ, ನೆನಪಿನ ಕಾಣಿಕೆ ಕಾರ್ಯಕ್ರಮ ಜರುಗಿತು.

ಬಾಗಲಕೋಟೆ ಜಿಲ್ಲೆಯ ಉಸ್ತುವಾರಿ ಸಚಿವರಾದ ಶರಣ. ಎಸ್.ಆರ್. ಪಾಟೀಲರು ಬಸವ ಧರ್ಮ ವಿಶ್ವಧರ್ಮ ಇಂದಿನ ನಮ್ಮ ಕಾಂಗ್ರೆಸ್ ಸರಕಾರ ಬಸವಣ್ಣನವರ ಜಾತಿ ವರ್ಣ ವರ್ಗ ರಹಿತ ತತ್ತ್ವದಂತೆ ಆಡಳಿತವನ್ನು ಮಾಡುವಂತಹುದು ಆಗಿರುವುದು. ಅದಕ್ಕಾಗಿ ಸರ್ವರೂ ಇಂತಹ ಲಿಂಗಾಯತ ಧರ್ಮದ ತತ್ತ್ವದಂತೆ ಜೀವನ ಸಾಗಿಸಿ ಪಾವನರಾಗಬೇಕೆಂದು ತಿಳಿಸಿದರು. ಹಾಗೂ ಇಲ್ಲಿಯ ರಾಷ್ಟ್ರೀಯ ಬಸವ ದಳಕ್ಕೆ ಅವಶ್ಯವಿರುವ ಎಲ್ಲ ರೀತಿಯ ಸಹಾಯ ಸಹಕಾರವನ್ನು ಪ್ರಾಮಾಣಿಕವಾಗಿ ಮಾಡಿ ಪಾವನನಾಗುವೆ ಎಂದು ತಿಳಿಸಿದರು. ಇಂತಹ ಸಮಾರಂಭದಲ್ಲಿ ಭಾಗವಹಿಸುವ ಅವಕಾಶ ಮಾಡಿಕೊಟ್ಟ ಪೂಜ್ಯರಿಗೆ ಸದಸ್ಯರಿಗೆ ಹಾಗೂ ಸರ್ವಶರಣ ಬಂಧುಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಅದರಂತೆ ಶಾಸಕರಾದ ಶರಣ.ಶ್ರೀ ಎಚ್.ವಾಯ್.ಮೇಟಿಯವರು ಪೂಜ್ಯ ಶ್ರೀ ಮಾತಾಜಿಯವರ ಸತ್ಸಂಕಲ್ಪಕ್ಕೆ ನನ್ನ ಕೈಲಾದ ಮಟ್ಟಿಗೆ ಸಹಾಯ ಸಹಕಾರವನ್ನು ಮಾಡುವೆ ಎಂದು ತಿಳಿಸಿದರು. ಆನಂತರ ಪೂಜ್ಯ ಶ್ರೀ ಮಾತಾಜಿಯವರು ವಿಶ್ವಗುರು ಬಸವಣ್ಣನವರು ನಮ್ಮೆಲ್ಲರಿಗೆ ಶ್ರೇಷ್ಠಮಟ್ಟದ ಲಿಂಗಾಯತ ಧರ್ಮವನ್ನು ಹಾಗೂ ಮಾನವ ಜೀವನದ ಶ್ರೇಷ್ಠ ತತ್ತ್ವಗಳನ್ನು ಕೊಟ್ಟಿದ್ದಾರೆ. ಅದರಂತೆ ನಡೆದು ಜೀವನವನ್ನು ಪಾವನವನ್ನಾಗಿ ಮಾಡಿಕೊಳ್ಳಿ ಮತ್ತು ವಾರಕ್ಕೊಂದು ದಿನ ರವಿವಾರದಂದು ಬಸವ ಮಂಟಪದ ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗಿಗಳಾಗಿ ನಿಮ್ಮ ಜೀವನ ಎಂಬ ಕಾರನ್ನು ಸರ್ವಿಸ್ ಮಾಡಿಸಿಕೊಳ್ಳಿರಿ ಎಂದು ಉಪದೇಶ ನೀಡಿದರು.

–ರಂ.ಮ. ಹಲ್ಯಾಳ

ಪುಣೆಯಲ್ಲಿ ಪೂಜ್ಯ ಶ್ರೀ ಮಾತಾಜಿಯವರಿಗೆ ಅಭಿನಂದನೆ

ಗುರು ಬಸವಣ್ಣನವರ ಕಾರ್ಯಕ್ಷೇತ್ರ ಬಸವ ಕಲ್ಯಾಣದಲ್ಲಿ 108ಅಡಿ ಬಸವ ಪುತ್ಥಳಿಯನ್ನು ನಿರ್ಮಾಣ ಮಾಡಿಸಿದ್ದಕ್ಕಾಗಿ ಪುಣೆಯ ಭಕ್ತರಿಗೆ ಅಪಾರವಾದ ಆನಂದವಾಗಿತ್ತು. ಅಲ್ಲಿಂದ ಬಹಳ ಜನರು ಉದ್ಘಾಟನಾ ಸಮಾರಂಭಕ್ಕೆ ಬಂದಿದ್ದರು. ಪ್ರಸಿದ್ಧ ಉದ್ಯಮಿ ಧರ್ಮರಾಜ ಖೇಣಿಯವರೂ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಸಂತೋಷ ವ್ಯಕ್ತಪಡಿಸಿದ್ದರು. ಅವರ ನೇತೃತ್ವದಲ್ಲಿ ಪೂಜ್ಯ ಮಾತಾಜಿಯವರಿಗೆ ಸನ್ಮಾನ ಸಮಾರಂಭ ಏರ್ಪಡಿಸಬೇಕೆಂದು ರಾಷ್ಟ್ರೀಯ ಬಸವ ದಳದವರು ಯೋಜನೆ ರೂಪಿಸಿದ್ದರು. ಪುಣೆಯ ಭೋಸರಿಯಲ್ಲಿರುವ ಭವ್ಯವಾದ ಆಡಿಟೋರಿಯಮ್ ಅಂಕುಶರಾವ್ ಲಾಂಡಗೆ ಸಭಾ ಭವನವನ್ನು ಜೂನ್ 27ಕ್ಕೆ ಗೊತ್ತು ಮಾಡಿದ್ದರು. ಪುಣೆಯಲ್ಲಿ ಕೆಲವರಿಗೆ ಭಾನುವಾರ ರಜೆ, ಕಾರ್ಮಿಕರಿಗೆ ಗುರುವಾರ ರಜೆ, ಅದಕ್ಕಾಗಿ ಗುರುವಾರವನ್ನೇ ಗೊತ್ತು ಮಾಡಲಾಗಿತ್ತು. ಶಿಬಿರದಲ್ಲಿ ಭಾಗವಹಿಸಲು ಕೂಡಲಸಂಗಮಕ್ಕೆ ಆಗಮಿಸಿದ್ದ ಪೂಜ್ಯ ಮಾತಾಜಿ ಅಲ್ಲಿಂದಲೇ ಪುಣೆಗೆ ದಿ.26ರಂದು ಪ್ರಯಾಣಿಸಿದರು.

ಪುಣೆಯ ನಾನಾಭಾಗಗಳಿಂದ ಮಾತ್ರವಲ್ಲದೆ ಕೊಲ್ಹಾಪುರ, ಸಾಂಗ್ಲಿ ಜಿಲ್ಲೆಗಳಿಂದಲೂ ಅಭಿಮಾನಿಗಳು ಆಗಮಿಸಿದ್ದರು. ಬೀದರ ಜಿಲ್ಲೆಯ ವಿವಿಧ ಗ್ರಾಮಗಳಿಂದ ಕಾಯಕಕ್ಕೆಂದು ಬಂದು ಪುಣೆಯಲ್ಲಿ ನೆಲೆಸಿರುವ ಜನ ಬಹಳ. ಅವರು ಬೀದರ್ ಜಿಲ್ಲೆಯಿಂದ ತಮ್ಮ ಬಂಧು ಬಳಗದವರನ್ನು ಈ ವಿಶೇಷ ಸಮಾರಂಭಕ್ಕಾಗಿ ಕರೆಸಿಕೊಂಡಿದ್ದರು. ಹೀಗಾಗಿ ಬೃಹತ್ ಸಭಾ ಭವನವು ತುಂಬಿ ಜನರು ಹೊರಗಡೆ ನಿಂತಿದ್ದರು. ಬೀದರ್ ಜಿಲ್ಲೆಯಲ್ಲಿ ಪ್ರಚಂಡ ಬಹುಮತದಿಂದ ಆಯ್ಕೆಯಾದ ಕರ್ನಾಟಕ ಮಕ್ಕಳ ಪಕ್ಷದ ಶಾಸಕ, ನೈಸ್ ಕಂಪನಿಯ ಮಹಾನಿರ್ದೇಶಕ ಶರಣ. ಅಶೋಕ ಖೇಣಿಯವರು, ಮತ್ತೊಬ್ಬ ಉದ್ಯಮಿಗಳಾದ ಶರಣ. ಅಪ್ಪಾಸಾಹೇಬ ರಾಜಮಾನೆ, ಉದ್ಯಮಿ ಹಾಗೂ ಸಮಾಜ ಸೇವಕರಾದ ಶರಣ. ಧವಳೇಶ್ವರ ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಪೂಜ್ಯ ಮಾತಾಜಿಯವರಿಗೆ ಪುಷ್ಪವೃಷ್ಟಿ ಆರತಿಯನ್ನು ಮಾಡಲಾಯಿತು. ಸನ್ಮಾನ ಪತ್ರವನ್ನು, ವಿಶೇಷವಾಗಿ ಎಂಬ್ರಾಯಡರಿ ಮಾಡಿದ ಗುರು ಬಸವಣ್ಣನವರ ಭಾವಚಿತ್ರಗಳನ್ನು ನೆನಪಿನ ಕಾಣಿಕೆಯಾಗಿ ನೀಡಲಾಯಿತು.

ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶರಣ ಅಶೋಕ ಖೇಣಿಯವರು ಸಮಾಜ ಸೇವೆಯ ಉದ್ದೇಶದಿಂದ, ಬೀದರ ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಆಕಾಂಕ್ಷೆಯಿಂದ ತಾವು ಶಾಸಕರಾಗಿರುವುದಾಗಿ ಹೇಳಿ, ಪೂಜ್ಯ ಮಾತಾಜಿಯವರ ಸಾಧನೆಯನ್ನು ಕೊಂಡಾಡಿದರು. ■

ಮೈಸೂರಿನಲ್ಲಿ ಆಗಸ್ಟ್ 4 ರಂದು
818ನೆಯ ಬಸವಲಿಂಗೈಕ್ಯ ಸಂಸ್ಮರಣೆ

ಮೈಸೂರು ರಾಷ್ಟ್ರೀಯ ಬಸವ ದಳದ ವಾರ್ಷಿಕೋತ್ಸವ ಮತ್ತು 818ನೆಯ ಬಸವಲಿಂಗೈಕ್ಯ ಸಂಸ್ಮರಣೆಯನ್ನು ದೇವ (ಭಾನು)ವಾರ 4–8–2013ರಂದು ಬೆಳಿಗ್ಗೆ 10–30ರಿಂದ ಮೈಸೂರು ನಗರದ ಅಗ್ರಹಾರದಲ್ಲಿರುವ ನಟರಾಜ ಕಲ್ಯಾಣಮಂಟಪದಲ್ಲಿ ಏರ್ಪಡಿಸಲಾಗಿದೆ. ನಟರಾಜ ಕಲ್ಯಾಣ ಮಂಟಪದ ಅಧ್ಯಕ್ಷರಾದ ಹೊಸಮಠದ ಪೂಜ್ಯ ಶ್ರೀ ನಿ.ಪ್ರ.ಚಿದಾನಂದ ಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ಬಸವ ಧರ್ಮ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವದಲ್ಲಿ ನಡೆಯಲಿರುವ ಈ ಸಮಾರಂಭಕ್ಕೆ ಹೆಚ್ಚಿನ ಜನ ಆಗಮಿಸಿ ಪೂಜ್ಯರ ಆಶೀರ್ವಚನ ಆಲಿಸಿ, ಆಶೀರ್ವಾದವನ್ನು ಪಡೆಯಬೇಕೆಂದು ಕೋರುತ್ತೇವೆ.

ಶರಣ.ಕೆ.ಎಂ. ಶಿವಶಂಕರ್	ಡಾ॥ ವಿ.ಗೋಪಾಲ್	ಶರಣೆ.ಸರೋಜಮ್ಮ ನಾಗರಾಜು
ಗೌರವಾಧ್ಯಕ್ಷರು.ರಾ.ಬ.ದಳ	ಅಧ್ಯಕ್ಷರು, ರಾ.ಬ.ದಳ	ಪ್ರಧಾನ ಕಾರ್ಯದರ್ಶಿ. ರಾ.ಬ.ದಳ

ಬಸವ ತತ್ತ್ವ ತರಬೇತಿ ಶಿಬಿರ

–ಚಂದ್ರಶೇಖರ್

ಕೂಡಲಸಂಗಮದ ಬಸವ ಧರ್ಮಪೀಠದ ಮಹಾಮನೆ ಮಹಾಮಠ ಆವರಣದಲ್ಲಿ ಬಸವ ತತ್ತ್ವ ತರಬೇತಿ ಶಿಬಿರವು 15 ದಿವಸಗಳ ಕಾಲ ದಿ.16–6–2013ರಿಂದ 30–6–2013ರವರೆಗೆ ಸಾಂಗವಾಗಿ ನೆರವೇರಿತು. ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಜಗದ್ಗುರು ಪೂಜ್ಯ ಶ್ರೀ ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ಈ ಶಿಬಿರವು ನಡೆಯಿತು. ಮುಂಜಾನೆ 5 ಗಂಟೆಯಿಂದ 7 ಗಂಟೆಯವರೆಗೆ ಅಥಣಿಯ ಪತಂಜಲ ಯೋಗ ಕೇಂದ್ರದ ಡಾ॥ ಶಿವಕುಮಾರ ಕಲ್ಯಾಣಮಠ ಅವರು ಯೋಗಾಸನ–ಪ್ರಾಣಾಯಾಮ–ಧ್ಯಾನ ತರಗತಿಗಳನ್ನು ನಡೆಸಿಕೊಟ್ಟರು. ಬೆಳಿಗ್ಗೆ 8ರಿಂದ 9–30ರವರೆಗೆ ಪೂಜ್ಯ ಶ್ರೀ ಜಗದ್ಗುರು ಬಸವಕುಮಾರ ಸ್ವಾಮಿಗಳು, ಲಿಂಗಾಂಗ ಯೋಗದ ಅನುಸಂಧಾನ ಮಾಡಿಸುತ್ತಿದ್ದರು. 10–30ರಿಂದ ವಿವಿಧ ಪ್ರಾತ್ಯಕ್ಷಿಕೆಗಳನ್ನು ತೋರಿಸಲಾಗುತ್ತಿತ್ತು. ಬಸವೇಶ್ವರ ಪೂಜಾವ್ರತ, ಗರ್ಭಲಿಂಗಧಾರಣೆ, ನಾಮಕರಣ, ಗೃಹ ಪ್ರವೇಶ, ವಿವಾಹ, ವಿಭೂತಿ ವೀಳ್ಯ, ಲಿಂಗೈಕ್ಯ ಸಂಸ್ಕಾರ ಮುಂತಾದ ಕ್ರಿಯೆಗಳ ಪ್ರಾತ್ಯಕ್ಷಿಕೆ ತೋರಿಸಲಾಯಿತು. ಮಧ್ಯಾಹ್ನದ ಪ್ರಸಾದದ ನಂತರ 3–30 ರಿಂದ ಚಿಂತನಮಂಥನ–ಚರ್ಚಾಗೋಷ್ಠಿ ಪ್ರಶ್ನೆಗಳನ್ನು ಕೇಳಿ ಶಿಬಿರಾರ್ಥಿಗಳಿಂದ ಉತ್ತರವನ್ನು ಪಡೆಯಲಾಗುತ್ತಿತ್ತು. ಪೂಜ್ಯ ಶ್ರೀ ಮಾತೆ ಸತ್ಯಾದೇವಿ ಇವರ ನೇತೃತ್ವದಲ್ಲಿ ಪ್ರಾತ್ಯಕ್ಷಿಕೆ ಹಾಗೂ ಚಿಂತನ–ಮಂಥನ ನಡೆದವು. ನಂತರ ಆಟ–ಓಟ. ಅಲ್ಪವಿಶ್ರಾಂತಿಯ ನಂತರ ಚಹಾಪಾನ. ಸಂಜೆ 7 ಗಂಟೆಗೆ ಸರಿಯಾಗಿ ನೆನಹು, ನಂತರ ವಿಶ್ವಧರ್ಮ ಪ್ರವಚನ ಒಂದೊಂದು ವಿಷಯವನ್ನು ತೆಗೆದುಕೊಂಡು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಅಮೋಘವಾಗಿ ಪ್ರವಚನವನ್ನು ಮಾಡಿದರು. *(ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಆರೋಹಣ ದಿ.27–5–2013ರಂದು ನೆರವೇರಿತು. ಇನ್ನು ಅವರು ಪ್ರವಚನ ಮಾಡಲು ಹೊರಡಬೇಕು ಎನ್ನುವಷ್ಟರಲ್ಲಿ ದಿ.29ರಂದು ಕಾಲು ಜಾರಿ ಬಿದ್ದು ಕಾಲಿನ ಮೂಳೆ ಮುರಿತಕ್ಕೆ ಒಳಗಾದರು. ಹೀಗಾಗಿ ವೈದ್ಯರ ಸಲಹೆಯ ಮೇರೆಗೆ ವಿಶ್ರಾಂತಿಯಲ್ಲಿದ್ದ ಅವರು ಶಿಬಿರದಲ್ಲಿ ಪ್ರವಚನವನ್ನು ಪ್ರತಿದಿನ ಸಂಜೆ ನಡೆಸಿಕೊಡಲು ಸಾಧ್ಯವಾಯಿತು)* ಅವರ ಪ್ರವಚನ ಶಾಂತವಾಗಿ ಹರಿಯುವ ಗಂಗಾಪ್ರವಾಹ. ಅದರಲ್ಲಿರುವ ಪ್ರೌಢತೆ, ಪರಿಪಕ್ವತೆ ಕಂಡು ಎಲ್ಲರೂ ಸಂತೋಷಭರಿತರಾದರು. ಸಾಂಸ್ಕೃತಿಕ ಕಾರ್ಯಕ್ರಮಗಳಾಗಿ ಶಿಬಿರಾರ್ಥಿಗಳಿಂದ ನಾಟಕ, ಏಕಪಾತ್ರಾಭಿನಯ ನಡೆದವು. ಸುಮಾರು 150 ಶಿಬಿರಾರ್ಥಿಗಳು ಶಿಬಿರದ ಸದುಪಯೋಗ ಪಡೆದುಕೊಂಡರು. ಕೆಲವರು ಕ್ರಿಯಾ ಮೂರ್ತಿ ದೀಕ್ಷೆಯನ್ನೂ ಪಡೆದರು.

ಸಮಾರೋಪ ಸಮಾರಂಭ, 63ಅಡಿ ಪುತ್ಥಳಿಗೆ ನಾಂದಿಪೂಜೆ

ದಿ.30–6–2013ರಂದು ಸಮಾರೋಪ ಸಮಾರಂಭ, ಬೆಳಿಗ್ಗೆ 10–30ಕ್ಕೆ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರ 63ಅಡಿ ಎತ್ತರದ ಪುತ್ಥಳಿಗೆ ನಾಂದೀಪೂಜೆ ನೆರವೇರಿಸಲಾಯಿತು. ಅಪೂರ್ವ ಪ್ರವಚನಕಾರರು, ಬಸವ ಯುಗ ನಿರ್ಮಾಪಕರು, ಬಸವ ತತ್ತ್ವ ಪುನರುದ್ಧಾರಕರೂ ಆದ ಪ್ರವಚನ ಪಿತಾಮಹ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳ ಹೆಸರಿನಲ್ಲಿ ಒಂದು ಸ್ಮಾರಕವನ್ನು ರಚಿಸಬೇಕು ಎಂಬ ಉದ್ದೇಶದಿಂದ ಪೂಜ್ಯರ 63 ಅಡಿ ಎತ್ತರದ ಪುತ್ಥಳಿಯ ಪ್ರಾರಂಭಕ್ಕೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನಾಂದಿಪೂಜೆ ಮಾಡಿ ಗುದ್ದಲಿ ಹಾಕಿದರು. ಲಿಂಗಾಯತ ಪಂಚಮಸಾಲೆ ಪೀಠದ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಬಸವ ಜಯ ಮೃತ್ಯುಂಜಯ ಸ್ವಾಮಿಗಳು ಸಮಾರಂಭವನ್ನು ಉದ್ಘಾಟಿಸಿದರು. ಶರಣ. ಎಲ್.ಎಂ. ಪಾಟೀಲರು ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಉಭಯತರೂ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಕಾರ್ಯವನ್ನು ಶ್ಲಾಘಿಸಿದರು. ಅವರಿಗೆ ಸ್ಮಾರಕವಾಗಿ 63ಅಡಿ ಎತ್ತರದ ಪುತ್ಥಳಿ ನಿರ್ಮಿಸುತ್ತಿರುವುದು ಸ್ತುತ್ಯರ್ಹವೆಂದರು. ಶಿಬಿರಾರ್ಥಿಗಳಿಗೆ ಪ್ರಶಸ್ತಿ ಪತ್ರವನ್ನು ಪೂಜ್ಯ ಶ್ರೀ ಜಗದ್ಗುರು ಚನ್ನಬಸವಾನಂದ ಸ್ವಾಮಿಗಳು ವಿತರಿಸಿದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ದಿವ್ಯ ಸನ್ನಿಧಿ ವಹಿಸಿದ್ದರು. ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳು ನೇತೃತ್ವ ವಹಿಸಿದ್ದರು. ಯೋಗ ಶಿಕ್ಷಕ ಡಾ॥ ಶಿವಕುಮಾರ ಕಲ್ಯಾಣಮಠ ಅವರನ್ನು ಸನ್ಮಾನಿಸಲಾಯಿತು.

'ಕಪಿಲಸಿದ್ಧಮಲ್ಲಿಕಾರ್ಜುನ' ನಿಂದ 'ಕಪಿಲಸಿದ್ಧಮಲ್ಲಿಕಾರ್ಜುನದೇವರ ದೇವ' ನೆಡೆಗೆ ಶಿವಯೋಗಿ ಸಿದ್ಧರಾಮೇಶ್ವರರು

– ಸಚ್ಚಿದಾನಂದ ಚಟ್ನಳ್ಳಿ, ಬೆಂಗಳೂರು

ಗುರು ಸಿದ್ಧರಾಮೇಶ್ವರರು ಲಿಂಗಾಯತ ಧರ್ಮ ಸಂಹಿತೆಗೆ(ವಚನ ಸಾಹಿತ್ಯಕ್ಕೆ) ನೀಡಿದ ಕೊಡುಗೆ ಅನನ್ಯವಾದುದು. ಧರ್ಮಗುರು ಬಸವಣ್ಣನವರು ಲಿಂಗಾಯತ ಧರ್ಮದ ಸಂಸ್ಥಾಪಕರಾದರೆ ಸಿದ್ಧರಾಮೇಶ್ವರನ್ನೊಳಗೊಂಡು ಅಲ್ಲಮಪ್ರಭುದೇವರು, ಚೆನ್ನಬಸವಣ್ಣನವರು, ಅಕ್ಕಮಹಾದೇವಿ, ಮಡಿವಾಳ ಮಾಚಿದೇವರು, ಅಕ್ಕನಾಗಲಾಂಬಿಕೆ ಇವರೆಲ್ಲರೂ ಲಿಂಗಾಯತ ಧರ್ಮದ ಆಧಾರ ಸ್ತಂಭಗಳು. ಇವರೆಲ್ಲರೂ ಲಿಂಗಾಯತ ಧರ್ಮ ಸಂಹಿತೆಗೆ ಅಪಾರವಾದವಾದ ಕೊಡುಗೆಯನ್ನು ನೀಡಿದ್ದಾರೆ.

ಇವರಲ್ಲಿ ಧರ್ಮಗುರು ಬಸವಣ್ಣನವರು, ಅಕ್ಕಮಹಾದೇವಿ ಮತ್ತು ಸಿದ್ಧರಾಮೇಶ್ವರರು ಶಿವಭಕ್ತಿಯ ಹಿನ್ನಲೆಯುಳ್ಳವರು. ಈ ಮೂವರು ಪೂಜ್ಯರು ಬಾಲ್ಯದಲ್ಲಿ ಅಗಾಧವಾದ ಶಿವಭಕ್ತಿಯನ್ನು ಮೈಗೂಡಿಸಿಕೊಂಡವರು. ಧರ್ಮ ಗುರು ಬಸವಣ್ಣನವರು ಬಾಲ್ಯದಲ್ಲಿ ಶಿವನ ಪ್ರತಿರೂಪವಾದ ಕೂಡಲ ಸಂಗಮೇಶ್ವರನನ್ನು ಆರಾಧಿಸುತ್ತ, ವಚನಗಳನ್ನು ರಚಿಸಲು ಆರಂಭಿಸಿ ತಮ್ಮ ಭಕ್ತಿಯ ಕೇಂದ್ರಬಿಂದುವಾದ ಕೂಡಲ ಸಂಗಮದೇವಾ ಎನ್ನುವ ವಚನಾಂಕಿತದೊಡನೆ ವಚನಗಳನ್ನು ಬರೆಯುತ್ತಾ ಹಾಡುತ್ತ ಭಕ್ತಿ ಸಂಪನ್ನರಾದರು. ಅವರು ಬೆಳೆದು ದೊಡ್ಡವರಾದಂತೆ ವೇದ ಶಾಸ್ತ್ರಗಳನ್ನು ಅಧ್ಯಯನ ಮಾಡುತ್ತ ವೇದಗಳಲ್ಲಿ ಇರುವ ಬ್ರಹ್ಮ – ಪರಬ್ರಹ್ಮ ಮತ್ತು ಆಗಮಗಳಲ್ಲಿ ಇರುವ ಶಿವ – ಪರಶಿವ ಶಬ್ದಗಳ ವ್ಯತ್ಯಾಸವನ್ನು ಗುರುತಿಸಿ ಇವುಗಳ ಬಗ್ಗೆ ಚಿಂತನೆ ನಡೆಸಿದರು. ಆಗ ಅವರ ಮನಸ್ಸಿಗೆ ಬ್ರಹ್ಮ ಬೇರೆ ಪರಬ್ರಹ್ಮ ಬೇರೆ, ಶಿವ ಬೇರೆ ಪರಶಿವ ಬೇರೆ ಎನ್ನುವ ವಿಚಾರ ಸ್ಪಷ್ಟವಾಗತೊಡಗಿತು. ದೇವರು ನಿರಾಕಾರನೂ ನಿರ್ಗುಣನೂ, ಹುಟ್ಟುಸಾವುಗಳಿಗೆ ಅತೀತನಾದವನು ಎನ್ನುವ ತತ್ವ ತಮ್ಮ ಮನಸ್ಸಿನಲ್ಲಿ ಸ್ಪಷ್ಟವಾಗುತ್ತಲೇ, ಕೂಡಲ ಸಂಗಮದೇವ(ಶಿವ)ನು ಒಂದಾನೊಂದು ಕಾಲದಲ್ಲಿ ಹುಟ್ಟಿ ಈ ಇಳೆಯಲ್ಲಿ ಬದುಕಿ ಮತ್ತೊಂದು ದಿನ ಐಕ್ಯವಾದವನು. ಹೀಗಾಗಿ ಕೂಡಲಸಂಗಮದೇವರು ದೇವರಲ್ಲ ಅವರು ಒಬ್ಬ ಮಹಾತ್ಮ, ಯೋಗಿ, ತ್ಯಾಗಿ ಹಾಗು ಭಾರತದೇಶದ ಭಕ್ತಿಪರಂಪರೆಯ ಆದಿಗುರು ಎಂದು ಗುರುತಿಸಿದರು. ಜೊತೆಗೆ ಇದುವರೆಗೆ ಪೂಜಿಸುತ್ತಿದ್ದ ಕೂಡಲ ಸಂಗಮದೇವ ಸ್ಥಾವರ ಲಿಂಗವು ಅದು ಶಿವನ ಕುರುಹು ಸಂಕೇತ ಪ್ರತಿರೂಪ ಎನ್ನುವುದು ಅವರಿಗೆ ಸ್ಪಷ್ಟವಾಯಿತು. ನಿರಾಕಾರನಾದ ದೇವ(ಪರಮಾತ್ಮ)ನನ್ನು ಕುರಿತು ಧ್ಯಾನಿಸಲು ಆರಂಭಿಸಿದಾಗಲೇ ಅವರಿಗೆ ಪರಮಾತ್ಮನ ಸಾಕ್ಷಾತ್ಕಾರವಾಯಿತು ಜೊತೆಗೆ ಪರಮಾತ್ಮನಿಂದ ಅನುಗ್ರಹವೂ ಆಯಿತು. ವೇದಗಳಲ್ಲಿ ಪರಬ್ರಹ್ಮ ಮತ್ತು ಆಗಮಗಳಲ್ಲಿ ಪರಶಿವನೆಂದು ಕರೆಯಲ್ಪಟ್ಟ ನಿರಾಕಾರವಾದ ದೇವನನ್ನು ವಚನಸಾಹಿತ್ಯದಲ್ಲಿ **'ಲಿಂಗದೇವ'** ಎಂದು ಕರೆದರು. ನಿರಾಕಾರವಾದ ದೇವನನ್ನು ಸೂಕ್ತವಾದ ಸಾಕಾರ ರೂಪದಲ್ಲಿ ಪೂಜಿಸಬೇಕು ಎಂದು ಯೋಚಿಸುತ್ತಿರುವಾಗಲೇ ಇಷ್ಟಲಿಂಗದ ಪರಿಕಲ್ಪನೆ ಅವರ ಅಂತರಂಗದಲ್ಲಿ ಮೂಡಿ ಇಷ್ಟಲಿಂಗವನ್ನು ರೂಪಿಸಿ(ಕಂಡುಹಿಡಿದು) ಅದರಲ್ಲಿ ಪರಮಾತ್ಮನ ಅನುಗ್ರಹವನ್ನು ಅವತೀರ್ಣ ಮಾಡಿಕೊಂಡು ಆ ಇಷ್ಟಲಿಂಗವನ್ನು ಸ್ವತಃ ತಾವೇ ಧರಿಸಿಕೊಂಡು ಜಗತ್ತಿನ ಮೊಟ್ಟಮೊದಲ ಲಿಂಗಾಯತರಾದರು ಮಾತ್ರವಲ್ಲ ಲಿಂಗಾಯತ ಧರ್ಮದ ಸಂಸ್ಥಾಪಕರಾದರು. ಇದು ಅವರ ಜೀವನದ ಮಹತ್ವಪೂರ್ಣವಾದ ಘಟನೆ. ಇದು ಅವರು ಶಿವಭಕ್ತಿಯಿಂದ ಲಿಂಗದೇವನ ಭಕ್ತಿಗೆ ಪರಿವರ್ತನೆಯಾದ ಘಟನೆ. ತದನಂತರ ಗುರು ಬಸವಣ್ಣನವರು ತಮ್ಮ ವಚನಾಂಕಿತವಾದ **'ಕೂಡಲ ಸಂಗಮದೇವ'**ವನ್ನು ಬದಲಿಸಿ **'ಲಿಂಗದೇವಾ'**

ಎನ್ನುವ ವಚನಾಂಕಿತದೊಡನೆ ವಚನಗಳನ್ನು ಬರೆಯಲು ಆರಂಭಿಸಿದರು ಎನ್ನುವ ವಿಚಾರವನ್ನು ಬಸವ ಧರ್ಮ ಪೀಠದ ಪೀಠಾಧೀಶರಾದ ಜಗದ್ಗುರು ಮಾತೆ ಮಹಾದೇವಿಯವರು 1996ರಲ್ಲಿ ಸಂಶೋಧಿಸಿ ಗುರು ಬಸವಣ್ಣನವರ ಶಿವಭಕ್ತಿಯ ಜೀವನ ಮತ್ತು ಲಿಂಗದೇವನ ಭಕ್ತಿಯ ಜೀವನಗಳ ಮಧ್ಯೆ ಒಂದು ಸ್ಪಷ್ಟವಾದ ಗೆರೆಯನ್ನು ಎಳೆದರು.

ಅದೇ ರೀತಿ ಅಕ್ಕಮಹಾದೇವಿಯವರ ತಂದೆ-ತಾಯಂದಿರು ಗುರು ಬಸವಣ್ಣನವರ ತತ್ವದ ಸಂಪರ್ಕಕ್ಕೆ ಬರುವ ಮೊದಲಿನಿಂದಲೂ ಶಿವಭಕ್ತಿಯ ಪರಂಪರೆಯವರಾಗಿದ್ದರು. ಹೀಗಾಗಿ ಅಕ್ಕಮಹಾದೇವಿ ಬಾಲ್ಯದಲ್ಲಿ ಶಿವಭಕ್ತಿಯನ್ನು ಮೈಗೂಡಿಸಿಕೊಂಡು ಶರಣರ ವಚನಗಳಿಂದ ಪ್ರಭಾವಿತರಾಗಿ, ಶಿವಭಕ್ತಿಯನ್ನೇ ಧ್ಯೇಯವಾಗಿಟ್ಟುಕೊಂಡು ಚೆನ್ನಮಲ್ಲಿಕಾರ್ಜುನ(ಶಿವ)ನೇ ದೇವರೆಂದು ಭಾವಿಸಿ 'ಚೆನ್ನಮಲ್ಲಿಕಾರ್ಜುನ' ವಚನಾಂಕಿತದೊಂದಿಗೆ ವಚನಗಳನ್ನು ಬರೆಯಲು ಆರಂಭಿಸಿದ್ದರು. ಬಸವಕಲ್ಯಾಣದಿಂದ ಲಿಂಗಾಯತ ಧರ್ಮವು ಹೆಚ್ಚು ಹೆಚ್ಚು ಪ್ರಚಾರಗೊಳ್ಳುತ್ತಿದ್ದಂತೆ ಹೆಚ್ಚಿನ ವಚನಗಳು ಅಕ್ಕನಿಗೆ ಲಭ್ಯವಾಗತೊಡಗಿದವು. ಅವುಗಳ ಅಧ್ಯಯನದಿಂದ ಹೆಚ್ಚಿನ ಜ್ಞಾನ ಸಂಪಾದನೆ ಮಾಡುತ್ತ ಅಕ್ಕ ಚೆನ್ನಮಲ್ಲಿಕಾರ್ಜುನದೇವರಿಗೂ ದೇವನಾದ ನಿರಾಕಾರ ದೇವರನ್ನು ಅರಿತರು. ತದನಂತರ ಅಕ್ಕ ಚೆನ್ನಮಲ್ಲಿಕಾರ್ಜುನದೇವರ(ಶಿವನ) ಆರಾಧನೆಯಿಂದ ಚೆನ್ನಮಲ್ಲಿಕಾರ್ಜುನದೇವರ ದೇವನ ಆರಾಧನೆಗೆ ಪರಿವರ್ತನೆ ಹೊಂದಿ ತನ್ನ ವಚನಾಂಕಿತವನ್ನೂ **'ಚೆನ್ನಮಲ್ಲಿಕಾರ್ಜುನ ದೇವರ ದೇವ'** ಎಂದು ಬದಲಾಯಿಸಿಕೊಂಡಿರುವುದನ್ನು ನಾನು ಈ ಹಿಂದೆ ಸಂಶೋಧಿಸಿ **'ಅಕ್ಕನ ಸಮಗ್ರ ವಚನಗಳು ಮತ್ತು ಯೋಗಾಂಗ ತ್ರಿವಿಧಿ'** ಎನ್ನುವ ಗ್ರಂಥದಲ್ಲಿ ಅಳವಡಿಸಿರುವುದು ಅನೇಕರಿಗೆ ತಿಳಿದಿರುವ ವಿಷಯವೇ.

ಹಾಗೆಯೇ ಸಿದ್ಧರಾಮೇಶ್ವರರೂ ಗುರು ಬಸವಣ್ಣನವರ ತತ್ವಗಳ ಸಂಪರ್ಕಕ್ಕೆ ಬರುವ ಮೊದಲೇ ಶಿವಭಕ್ತಿಯ ಪರಂಪರೆಯವರಾಗಿದ್ದರು ಮತ್ತು ಬಾಲ್ಯದಿಂದಲೇ ಅಪಾರವಾದ ಶಿವಭಕ್ತಿಯನ್ನು ಮೈಗೂಡಿಸಿಕೊಂಡಿದ್ದರು. ಸೊನ್ನಲಾಪುರದಲ್ಲಿದುಕೊಂಡೇ ಕಲ್ಯಾಣದ ಶರಣರ ವಚನಗಳಿಂದ ಪ್ರಭಾವಿತರಾಗಿ ಶಿವಭಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ವಚನಗಳನ್ನು ಬರೆಯಲಾರಂಭಿಸಿದ್ದರು.

ಶಿವನೆ, ನಿಮ್ಮನಲ್ಲದೆ ಮತ್ತೊಂದ ನಾನರಿಯೆನಯ್ಯಾ
ಶಿವನೆ, ನಿಮ್ಮ ಸೇವೆಯನಲ್ಲದೆ,
ಮತ್ತೊಂದಕ್ಕೆ ಮನ ಹಾರೈಸದಂತೆ ಮಾಡಯ್ಯಾ,
ಕಪಿಲಸಿದ್ಧಮಲ್ಲಿನಾಥಯ್ಯಾ —ಸಿ.ವ.ಸಂ–1008

ಶಿವನೇ ಶಿವನೇ ಎಂದು ಒರಲುವೆನಯ್ಯಾ
ಅಭವನೇ ಅಭವನೇ ಎಂದು ಬಾಯ ಬಿಡುವೆನಯ್ಯಾ.
ಎನ್ನ ಬಾಯಿಗೆ ನಿಮ್ಮ ಪ್ರಸಾದವನಿಕ್ಕೆ,
ಎನ್ನ ತನು ನಿಮಗಾಯಿತ್ತು, ಕಪಿಲಸಿದ್ಧಮಲ್ಲಿನಾಥಯ್ಯಾ —ಸಿ.ವ.ಸಂ 1010

ಆರೆನಯ್ಯೋ, ಶಿವನೆ ತೆರಹುಗೆಡಿಸುತ್ತದೆ
ಕುರುಹೊಂದು ತೋರಿರಿ
ಎನ್ನ ನೀವು ಉಸುರದಂತಿದ್ದರೆ ನರಕಕ್ಕೆ ಒಯ್ದಿತ್ತು
ಶಶಿಧರ ಕಾಯಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನ. —ಸಿ.ವ.ಸಂ –213

ಎಸಳ ಕುಸುಮ ನಿವಾರಿಸಲು ಅಯ್ಯಾ,
ನಾನು ನಿನ್ನ ದೆಸೆಗೆ ಕಂಬೇಟಗೊಂಡೆನಯ್ಯಾ
ಪಶುಪಾಶಮೋಚನ ಅಯ್ಯಾ,
ನಿನ್ನ ದೆಸೆ ಇದ್ದೆಸೆಯಾಗಯ್ಯಾ.
ಶಶಿಧರಾ, ನಿಮ್ಮ ವಶಕ್ಕೆನ್ನ ತೆಗೆದುಕೊಳ್ಳಯ್ಯಾ,
ಕಪಿಲಸಿದ್ಧಮಲ್ಲಿಕಾರ್ಜುನ. —ಸಿ.ವ.ಸಂ –342

ಲಿಂಗದ ಅಂಗವದು ಅಳವಡಿರೆ
ಸಂಗವ ಮಾಡು ಪುರಾತರ, ಮನವೆ.
ಕಂಗಳವರಿಯರೆ ತಿಂಗಳಧರನ ಪೂಜಿಸು ಮನವೆ.
ಅಂಗಾಂಗ ಸಮರಸವಾಗದಿರೆ
ಗಂಗಾಧರ ಕಪಿಲಸಿದ್ಧಮಲ್ಲಿಕಾರ್ಜುನ ಎನ್ನು, ಮನವೆ. —ಸಿ.ವ.ಸಂ –1914 ಹೀಗೆ

ಗಂಗಾಧರ, ಶಶಿಧರ, ತಿಂಗಳಧರ, ಎಂದು ಶಿವನನ್ನು ಸ್ತುತಿಸುತ್ತ,

ಅಯ್ಯ! ನೀ ಬಾರಯ್ಯ! ಬಂದು ಎನ್ನ ಹೃದಯ ಮನಸಾಸನವ ಮಾಡಿ ನಿಲ್ಲಯ್ಯ
ಹಾ! ಅಯ್ಯಾ! ಅಯ್ಯಾ! ನೀ ಬಾರ! ನಿನ್ನ ಧರ್ಮ!
ಕಪಿಲಸಿದ್ಧಮಲ್ಲಿನಾಥಯ್ಯ —ಸಿ.ವ.ಸಂ –59

ಎಂದು ಶಿವನ ಕರುಣೆಗಾಗಿ ಹಂಬಲಿಸಿದರು. ಸೊನ್ನಲಾಪುರದಲ್ಲಿ ಶ್ರೀಶೈಲ ಮಲ್ಲಿಕಾರ್ಜುನನ ಪ್ರತಿರೂಪವಾದ ಸ್ಥಾವರಲಿಂಗವನ್ನು ಸ್ಥಾಪಿಸಿ, ಕೆರೆ ಕಟ್ಟೆ ಬಾವಿಗಳನ್ನು ನಿರ್ಮಿಸುತ್ತ ಕರ್ಮಯೋಗಿಯಾಗಿ ಶಿವಭಕ್ತಿಯಲ್ಲಿ ತಲ್ಲೀನರಾಗಿದ್ದರು.

ಅಲ್ಲಮಪ್ರಭುದೇವರು ಅನಿಮಿಷನಿಂದ ಇಷ್ಟಲಿಂಗವನ್ನು ಪಡೆದು ದಿವ್ಯಾನುಭವವನ್ನು ಪಡೆದುಕೊಂಡರು. ಅವರು ಸಿದ್ಧರಾಮರಲ್ಲಿಗೆ ಬಂದು ಹಲವಾರು ಆಧ್ಯಾತ್ಮಿಕ ವಿಷಯಗಳನ್ನು ಚರ್ಚೆ ಮಾಡಿದರು. ಕಪಿಲಸಿದ್ಧಮಲ್ಲಿಕಾರ್ಜುನ ದೇವರಿಗೂ ದೇವನಾದ ಪರಮಾತ್ಮನ ವಿಷಯವನ್ನು ಮನದಟ್ಟು ಮಾಡಿಕೊಟ್ಟರು. ನಿರಾಕಾರ ದೇವನ ಸಾಕಾರ ಕುರುಹಾದ ಇಷ್ಟಲಿಂಗದ ಬಗ್ಗೆ ತಿಳಿಹೇಳಿದಾಗ

ಅಯ್ಯಾ, ನಿಮ್ಮ ಕರಸ್ಥಲದ ಘನವನುಪಮಿಸಬಲ್ಲವರಿಲ್ಲವಯ್ಯಾ
ನಿಮ್ಮ ಮಹಿಮೆಯನರಿವಡೆ ನಾನೇತರೊಳಗೇನಯ್ಯಾ?
ಇಷ್ಟಲಿಂಗವ ಮುಟ್ಟಿದ ಶರಣನೊಳಗೆ ಹುಟ್ಟಿದ
ಕರಸ್ಥಲವೆಷ್ಟೆಂಬುದ ತಿಳುಹಿ ಎನ್ನನುಳುಹಿಕೊಳ್ಳಾ,
ಕಪಿಲಸಿದ್ಧಮಲ್ಲಿಕಾರ್ಜುನ. —ಸಿ.ವ.ಸಂ –1394

ಎಂದು ಅಲ್ಲಮಪ್ರಭುದೇವರಿಗೆ ಇಷ್ಟಲಿಂಗದ ಮಹತ್ವವನ್ನರಿತು ತಿಳಿಸಿಕೊಡುವಂತೆ ಕೇಳಿದರು. ಇಷ್ಟಲಿಂಗವನ್ನು ಕಂಡು ಹಿಡಿದ ಗುರುಬಸವಣ್ಣನವರ ವ್ಯಕ್ತಿತ್ವ ಮತ್ತು ಅವರು ಕಲ್ಯಾಣದಲ್ಲಿ ಮಾಡುತ್ತಿದ್ದ ಕಾರ್ಯಗಳ ಬಗ್ಗೆ ತಿಳಿಹೇಳಿದಾಗ ಇಷ್ಟಲಿಂಗಕ್ಕಿಂತಲೂ ಗುರುಬಸವಣ್ಣನವರ ಲೋಹ ಚುಂಬಕ ವ್ಯಕ್ತಿತ್ವಕ್ಕೆ ಮಾರು ಹೋಗಿ

ಅಯ್ಯಾ, ನಿಮ್ಮ ಕರಸ್ಥಲದ ಘನ ನಿಮ್ಮಲ್ಲಿರಲಿ.
ಕರಸ್ಥಲವನೊಲ್ಲೆ, ಪರಸ್ಥಲವನೊಲ್ಲೆ, ಆವುದನೊಲ್ಲೆ ನೋಡಯ್ಯಾ.

ಕಪಿಲಸಿದ್ಧಮಲ್ಲಿನಾಥಯ್ಯಾ, ನೀ ಒಲಿದು, ಸಂಗನ ಬಸವಣ್ಣನ ಶ್ರೀಪಾದವ
ತೋರಿಹೆನೆಂಬ ಮಾತಿಗೆ ಮಾರುಹೋದೆನು
ಇನ್ನು ತೋರಿ ಎನ್ನನುಳುಹಿಕೊಳ್ಳಾ, ಎನ್ನ ದೇವರ ದೇವಾ. –ಸಿ.ವ.ಸಂ–1395

ಎಂದು ತಮ್ಮನ್ನು ಗುರು ಬಸವಣ್ಣನವರಲ್ಲಿಗೆ ಕರೆದುಕೊಂಡು ಹೋಗುವಂತೆ ಅಲ್ಲಮಪ್ರಭುದೇವರಲ್ಲಿ ಕೇಳಿಕೊಳ್ಳುತ್ತಾರೆ. ಸಿದ್ಧರಾಮೇಶ್ವರರು ಅಲ್ಲಮಪ್ರಭುದೇವರೊಂದಿಗೆ ಕಲ್ಯಾಣಕ್ಕೆ ಬಂದು, ಗುರು ಬಸವಣ್ಣನವರ ಸಂಪರ್ಕಕ್ಕೆ ಬಂದಮೇಲೆ ಅನುಭವ ಮಂಟಪದಲ್ಲಿ ಹಲವಾರು ದಿನಗಳ ಕಾಲ ನಿರಾಕಾರ ಪರಮಾತ್ಮನ ಬಗ್ಗೆ ಮತ್ತು ನಿರಾಕಾರ ಪರಮಾತ್ಮನ ಸಾಕಾರ ಕುರುಹಾದ ಇಷ್ಟಲಿಂಗದ ಬಗ್ಗೆ ಚರ್ಚೆ ಮಾಡುತ್ತಾರೆ.

ಕೈಯಲ್ಲಿ ಹಿಡಿದು ಕಾಬುದು ಕರ್ಮಪೂಜೆಯಲ್ಲವೆ?
ಮನದಲ್ಲಿ ನೆನೆದು ಮಾಡುವುದೆಲ್ಲವು ಕಾಯದ ಕರ್ಮವಲ್ಲವೆ?
ಭಾವಶುದ್ಧವನರಿವ ಪರಿ ಇನ್ನಾವುದು? ಕಪಿಲಸಿದ್ಧಮಲ್ಲಿಕಾರ್ಜುನ.
(–ಸಿ.ವ.ಸಂ–1372)

ಎಂದು ಕೇಳುತ್ತಾರೆ. ಅನುಭವ ಮಂಟಪದಲ್ಲಿ ಎಲ್ಲಾ ಶರಣರೊಂದಿಗೆ ಚರ್ಚಿಸಿದ ನಂತರ ಇಷ್ಟಲಿಂಗದ ಮಹಿಮೆಗೆ ಮನಸೋಲುತ್ತಾರೆ. ಚಿನ್ಮಯಜ್ಞಾನಿ ಚೆನ್ನಬಸವಣ್ಣನವರಿಂದ ಇಷ್ಟಲಿಂಗದೀಕ್ಷೆಯನ್ನು ಹೊಂದಿ ಶೈವಧರ್ಮದ ಶಿವಭಕ್ತಿಯಿಂದ ಲಿಂಗದೇವನ ಭಕ್ತಿಗೆ ಪರಿವರ್ತನೆಹೊಂದಿ ಲಿಂಗಾಯತರಾಗುತ್ತಾರೆ. ಈ ಐತಿಹಾಸಿಕವಾದ, ಅಗಾಧವಾದ ಮತ್ತು ತಾತ್ವಿಕವಾದ ಪರಿವರ್ತನಗೆ ಆತ್ಮಕಥನದಂತಿರುವ ಅವರ ವಚನಗಳಲ್ಲಿ ಸಾಕ್ಷಿದೊರೆಯುತ್ತದೆ.

ಎಲ್ಲ ಪ್ರಮಥರು ಲಿಂಗವ ಧರಿಸುತ್ತರಲು
ನಾನೇನು ಒಲ್ಲೆನೆಂಬುವುದು ಕರ್ಮದ ಬಲೆಯೊ, ಮಾಯದ ಬಲೆಯೊ?
ಎಲೆ ಕಪಿಲಸಿದ್ಧಮಲ್ಲಿನಾಥಯ್ಯಾ, ನಾ. ಧರಿಸಿಕೊಂಬುವೆ ಲಿಂಗವ.
ನೀ ಕರೆಸಿಕೊಂಬುವನಾಗು ಮತ್ತೋರ್ವನ ನಿನ್ನ ಪೂಜೆಗೆ ;
ನಾ ನಿನ್ನವನಲ್ಲೆಲೆ ದೇವಾ. (–ಸಿ.ವ.ಸಂ–1279)

ಹೀಗೆ ಇಷ್ಟಲಿಂಗವ ಧರಿಸಿಕೊಂಡ ಸಿದ್ಧರಾಮೇಶ್ವರರು 'ಕಪಿಲಸಿದ್ಧ ಮಲ್ಲಿಕಾರ್ಜುನ'(ಶಿವ)ನ ಪೂಜೆಯನ್ನು ಬಿಟ್ಟು, ಕಪಿಲಸಿದ್ಧ ಮಲ್ಲಿಕಾರ್ಜುನನಿಗೂ ದೇವರಾದ (ಪರಮಾತ್ಮ)ಲಿಂಗದೇವನನ್ನು ಪೂಜಿಸತೊಡಗಿದರು. ಇದಾದ ನಂತರ ಶಿವನ ಹೆಸರಾದ **'ಕಪಿಲಸಿದ್ಧ ಮಲ್ಲಿಕಾರ್ಜುನ'** ಎನ್ನುವ ವಚನಾಂಕಿತವನ್ನು ಬದಲಿಸಿಕೊಂಡು **'ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ'** ಎನ್ನುವ ವಚನಾಂಕಿತವನ್ನು ತಾವು ಮುಂದೆ ಬರೆದ ವಚನಗಳಲ್ಲಿ ಪ್ರಯೋಗಿಸಿದ್ದಾರೆ. ತಮಗೆ ಇಷ್ಟಲಿಂಗ ದೀಕ್ಷೆಯಾಗಿರುವುದು, ಗುರು ಬಸವಣ್ಣನವರ ದರ್ಶನವಾಗಿರುವುದು, ಶರಣರ ಸಂಗ ದೊರೆತಿರುವುದು ಮತ್ತು ತಾವು ನಿರಾಕಾರ ಪರಮಾತ್ಮನನ್ನು ಅರಿತಿರುವುದು ಅವರಲ್ಲಿ ಧನ್ಯತಾ ಭಾವವನ್ನುಂಟುಮಾಡಿದೆ.

ಪ್ರಭುವಿನ ದಯದಿಂದ ಬಂದೆನಿಲ್ಲಿಗೆ
ಇಷ್ಟಲಿಂಗದ ಮರ್ಮವನರಿದೆ.
ಗುರು ಬಸವನ ದಯೆ, ಚೆನ್ನಬಸವನ ಕೃಪೆ.
ಇದಕ್ಕೆ ಮಿಗಿಲಾಗಿ ಕಂಡು ಧನ್ಯನಾದೆ,
ಕಪಿಲಸಿದ್ಧಮಲ್ಲಿಕಾರ್ಜುನದೇವರ ದೇವಾ. (–ಸಿ.ವ.ಸಂ–786)

ಇಷ್ಟಲಿಂಗದೀಕ್ಷೆ ಹೊಂದಿದ ನಂತರ ಅವರು ಬರೆದ ವಚನಗಳ ಶೈಲಿ ಮತ್ತು ಭಾವಾರ್ಥಗಳಲ್ಲಿ ಅಗಾಧವಾದ ಬದಲಾವಣೆಯನ್ನು ಗುರುತಿಸಬಹುದು.

'ಕಪಿಲಸಿದ್ಧ ಮಲ್ಲಿಕಾರ್ಜುನ' , 'ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ' ಮತ್ತು 'ಯೋಗಿನಾಥ'

ಸಿದ್ಧರಾಮೇಶ್ವರರು ಸೊನ್ನಲಾಪುರದಲ್ಲಿ ಶಿವಭಕ್ತಿಯಲ್ಲಿ ನಿರತರಾಗಿದ್ದಾಗ **'ಕಪಿಲಸಿದ್ಧ ಮಲ್ಲಿಕಾರ್ಜುನ'** ಎನ್ನುವ ವಚನಾಂಕಿತದೊಂದಿಗೆ ವಚನಗಳನ್ನು ಬರೆಯಲು ಆರಂಭಿಸಿದರು. ಬಸವಕಲ್ಯಾಣಕ್ಕೆ ಬಂದು ಚೆನ್ನಬಸವಣ್ಣನವರಿಂದ ಇಷ್ಟಲಿಂಗದೀಕ್ಷೆ ಹೊಂದಿ ಶೈವ ಧರ್ಮದಿಂದ ಲಿಂಗಾಯತ ಧರ್ಮಕ್ಕೆ ಪರಿವರ್ತನೆ ಆದನಂತರ **'ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ'** ಎನ್ನುವ ವಚನಾಂಕಿತದೊಡನೆ ವಚನಗಳನ್ನು ಬರೆಯಲು ಆರಂಭಿಸಿದರು. ಅಕ್ಕಮಹಾದೇವಿಯವರು ಯೋಗಾಂಗ ತ್ರಿವಿಧಿ ಎನ್ನುವ ವಿಶಿಷ್ಟವಾದ ಆಧ್ಯಾತ್ಮಿಕ ಸಾಹಿತ್ಯ ರಚಿಸಿದಂತೆ ಸಿದ್ಧರಾಮೇಶ್ವರರು 'ಬಸವಸ್ತೋತ್ರ ತ್ರಿವಿಧಿ', 'ಮಿಶ್ರಸ್ತೋತ್ರ ತ್ರಿವಿಧಿ', 'ಅಷ್ಟಾವರಣ ತ್ರಿವಿಧಿ', 'ಸಂಕೀರ್ಣ ತ್ರಿವಿಧಿ' ಎನ್ನುವ ವಿಶೇಷವಾದ ಸಾಹಿತ್ಯವನ್ನು ಬರೆದಿದ್ದಾರೆ. ಈ ಸಾಹಿತ್ಯ ಛಂದೋಬದ್ಧವಾದ, ಪ್ರಾಸಬದ್ಧವಾದ, ಸುಲಲಿತವಾದ ಸಂಗೀತದ ಸ್ವಾದದಿಂದ ಕೂಡಿರುವ ಸಾಹಿತ್ಯ. ನಾಲ್ಕು ಸಾಲಿನ ಪದ್ಯಗಳನ್ನೊಳಗೊಂಡ ಈ ತ್ರಿವಿಧಿಗಳಿಗೆ **'ಯೋಗಿನಾಥ'** ಎನ್ನುವ ವಚನಾಂಕಿತವನ್ನು ಬಳಸಿದ್ದಾರೆ. **'ಯೋಗಿನಾಥ'** ಎನ್ನುವುದು ನಿರಾಕಾರನಾದ ಪರಮಾತ್ಮನ ಇನ್ನೊಂದು ಹೆಸರು. ಕರ್ನಾಟಕ ಸರಕಾರ ಹೊರತಂದಿರುವ ಸಮಗ್ರ ವಚನಸಂಪುಟಗಳ ಸಿದ್ಧರಾಮೇಶ್ವರರ (ದ್ವಿತೀಯ ಮುದ್ರಣ –2001)ವಚನಸಂಪುಟದಲ್ಲಿ ಸುಮಾರು ಮೂವತ್ತು ವಚನಗಳಲ್ಲಿ **'ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ'** ಎನ್ನುವ ವಚನಾಂಕಿತ ಪ್ರಯೋಗವಾಗಿದೆ. ವಚನ ಸಂಖ್ಯೆ : 28, 87., 108, 148, 197, 229, 247, 277, 301, 339, 372, 401, 426, 474, 489, 548, 575, 613, 698, 716, 888, 919, 977, 1070, 1100, 1134, 1143, 1171, 1254, 1774. ಈ ಎಲ್ಲಾ ವಚನಗಳಲ್ಲೂ ಸಿದ್ಧರಾಮೇಶ್ವರರ ವಚನಗಳ ವಚನಾಂಕಿತ **'ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ'** ಎಂದಿದೆ. ಆದ್ದರಿಂದ ಸಿದ್ಧರಾಮೇಶ್ವರರು ಇಷ್ಟಲಿಂಗ ದೀಕ್ಷೆ ಹೊಂದಿದ ನಂತರ ಬರೆದ ಎಲ್ಲಾ ವಚನಗಳ (ಸ್ತೋತ್ರ ತ್ರಿವಿಧಿ ಹೊರತು ಪಡಿಸಿ) ವಚನಾಂಕಿತ **'ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ'** ಎನ್ನುವುದೇ ಸೂಕ್ತವಾದ ವಚನಾಂಕಿತ.

ಸಿದ್ಧರಾಮೇಶ್ವರರು ಬರೆದ ಮೂಲ ವಚನಗಳಲ್ಲಿ **'ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ'** ಎನ್ನುವ ವಚನಾಂಕಿತ ಪ್ರಯೋಗ ಮಾಡಿದ್ದರೂ ಮುಂದೆ ವಚನ ಸಂಪಾದನಕಾರರು ಇದನ್ನು ಪರಿಗಣನೆಗೆ ತೆಗೆದುಕೊಳ್ಳದೇ ಕೈಬಿಡುತ್ತ ಬಂದಿರುವುದರಿಂದ ಸಿದ್ಧರಾಮೇಶ್ವರರು ಇಷ್ಟಲಿಂಗ ದೀಕ್ಷೆ ಹೊಂದಿದ ನಂತರ ಬರೆದ ಎಲ್ಲಾ ವಚನಗಳ ವಚನಾಂಕಿತ **'ಕಪಿಲಸಿದ್ಧ ಮಲ್ಲಿಕಾರ್ಜುನದೇವರ ದೇವಾ'** ಎಂದಿರುವುದರ ಬದಲಿಗೆ ವಚನ ಸಂಪುಟಗಳಲ್ಲಿ ಕೇವಲ 30 ವಚನಗಳಿಗೆ ಸೀಮಿತವಾಗಿದೆ.

ವಚನಗಳ ಸಂಪಾದನೆ ಮತ್ತು ವಿಂಗಡಣೆ

ವಚನಕಾರರ ಮನಸ್ಸು ಅದರಲ್ಲೂ ಮುಖ್ಯವಾಗಿ ಗುರು ಬಸವಣ್ಣನವರ, ಸಿದ್ಧರಾಮೇಶ್ವರರ ಮತ್ತು ಅಕ್ಕಮಹಾದೇವಿಯವರ ಮನಸ್ಸು ಮತ್ತು ಭಕ್ತಿ ಸಾಧಕಾವಸ್ಥೆಯಿಂದ ಪರಿಪೂರ್ಣಾವಸ್ಥೆಗೆ ಹಂತ ಹಂತವಾಗಿ ವಿಕಾಸಗೊಂಡಿದೆ. ಇವರೆಲ್ಲರೂ ಸಾಧಕಾವಸ್ಥೆಯಲ್ಲಿ ಬರೆದ ವಚನಗಳನ್ನು ಸಿದ್ಧಪುರುಷರಾದಾಗ ಅಥವ ಪರಿಪೂರ್ಣಾವಸ್ಥೆಗೆ ಏರಿದ ಮನಸ್ಥಿತಿಯಲ್ಲಿ ವಿವರಿಸಿದರೆ ಬಹುದೊಡ್ಡ ತಾತ್ವಿಕ ದೋಷವಾಗುತ್ತದೆ. ಏಕೆಂದರೆ ಬಾಲ್ಯದಲ್ಲಿ ಗುರುಬಸವಣ್ಣನವರು ಸಿರಿಯಾಳ–ಚೆಂಗಳೆಯರ ಶಿವಭಕ್ತಿಯನ್ನು ಹೊಗಳಿದರೆ ಪ್ರೌಢಾವಸ್ಥೆಗೆ ಬಂದಾಗ ಅದನ್ನು ಜರಿಯುತ್ತಾರೆ ಅದು ವೈಜ್ಞಾನಿಕವಾದ ಭಕ್ತಿಯಲ್ಲವೆಂದು ನಿಂದಿಸುತ್ತಾರೆ. ಅಕ್ಕಮಹಾದೇವಿ ಬಾಲ್ಯದಲ್ಲಿ ದೇವರ ಸ್ವರೂಪವನ್ನು, **"ಹೊಳೆವ ಕೆಂಜೆಡೆಯ ಮೇಲೆ ಎಳೆವೆಳದಿಂಗಳು" "ಹೊಳೆವ ಕೆಂಜೆಡೆಗಳ ಸುಲಿಪಲ್ಲ ಗೊರವ" "ಚೋಳಿಯಕ್ಕನ ಬಾಯ ತುತ್ತ ಸವಿದ ಶಶಿಮೌಳಿ"** ಎಂದು ವರ್ಣಿಸಿದರೆ, ಪ್ರೌಢಾವಸ್ಥೆಗೆ ಬಂದಾಗ "ಸಾವಿಲ್ಲದ

ಕೇಡಿಲ್ಲದ ರೂಹಿಲ್ಲದ ಚೆಲುವ, ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವ, ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವ, ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವ."; "ಅಯ್ಯಾ ಪಾತಾಳವಿತ್ತಿತ್ತ ಶ್ರೀಪಾದವತ್ತತ್ತ, ಬ್ರಹ್ಮಾಂಡವಿತ್ತಿತ್ತ ಮಣಿಮುಕುಟವತ್ತತ್ತ," ಎಂದು ವರ್ಣಿಸುತ್ತಾರೆ. ಸಿದ್ಧರಾಮೇಶ್ವರರು ಸಾಧಕಾವಸ್ಥೆಯಲ್ಲಿ "ಶಿವನೆ, ನಿಮ್ಮನಲ್ಲದೆ ಮತ್ತೊಂದ ನಾನರಿಯೆನಯ್ಯಾ."; "ಶಶಿಧರಾ, ನಿಮ್ಮ ವಶಕ್ಕೆನ್ನ ತೆಗೆದುಕೊಳ್ಳಯ್ಯಾ"; "ಕಂಗಳವರಿಯರೆ ತಿಂಗಳಧರನ ಪೂಜಿಸು ಮನವೆ." ಎಂದು ಶಿವಭಕ್ತಿಯನ್ನು ಮೆರೆದರೆ, ಕಲ್ಯಾಣದಲ್ಲಿ ಗುರು ಬಸವಣ್ಣನವರ ಸಂಪರ್ಕನಕ್ಕೆ ಬಂದ ಮೇಲೆ. "ಸರ್ಪನ ಮೇಲೆ ಪೃಥ್ವಿ ರಚಿಸದಂದು, ಸಮುದ್ರಂಗಳೇಳು ಹಾಸದಂದು, ಅಷ್ಟದಿಗುದಂತಿಗಳು ಹುಟ್ಟದಂದು, ಶಂಖ ಶಲಾಕೆಯಿಲ್ಲದಂದು, ಗಂಗೆ ಗೌರೀವಲ್ಲಭರಿಲ್ಲದಂದು, ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಈ ಐವರೂ ಹುಟ್ಟದಂದು, ಈ ಐವರ ತಾಯಿತಂದೆ ಇಲ್ಲದಂದು ನಿಜಗುರು ಕಪಿಲಸಿದ್ಧಮಲ್ಲೇಶ್ವರದೇವರ ದೇವಾ, ನಿಮ್ಮ ಹೆಸರೇನಯ್ಯಾ?"; "ಅಯ್ಯಾ, ನಿಮ್ಮಾಜ್ಞೆಯಲ್ಲಿಪ್ಪವು ಕಂಡಾ ಸಕಲ ಲೋಕಂಗಳು, ಅಯ್ಯಾ, ನಿಮ್ಮಿಚ್ಛಾಮಾತ್ರದಲ್ಲಿಪ್ಪರು ಕಂಡಾ ಕೋಟಿ ಹರಿವಿರಿಂಚ್ಯಾದಿಗಳು; ಅಯ್ಯಾ, ನಿಮ್ಮ ಮೀರಿದಾಧಿಕ್ಯವೊಂದೂ ಇಲ್ಲ. ಎಲೆ ಅಯ್ಯಾ, ಸಮಸ್ತ ಬ್ರಹ್ಮಾಂಡಗಳು, ನಿಮ್ಮ ರೋಮಕೂಪದಲ್ಲಿಪ್ಪವು. ನಿಮ್ಮನರಿಯದೆ ಏಕೆ ಕೆಡುವರಯ್ಯಾ ನರರು, ಕಪಿಲಸಿದ್ಧಮಲ್ಲಿಕಾರ್ಜುನದೇವರ ದೇವಾ" ಎಂದು ದೇವರ ಸ್ವರೂಪವನ್ನು ವರ್ಣಿಸುತ್ತಾರೆ. ಮತ್ತು "ಲಿಂಗವೆನ್ನಯ ತಂದೆ ಲಿಂಗವೆನ್ನಯ ತಾಯಿ, ಲಿಂಗವೆನ್ನಯ ಪರಮ ಜ್ಞಾನಮೂರ್ತಿ, ಲಿಂಗ ಗುರು ಮೂರ್ತಿಯ ಪಾದಕ್ಕೆ ಶರಣೆಂದು, ಲಿಂಗ ನೀ ನಾನಾದೆ ಯೋಗಿನಾಥ" ಎಂದು 'ಲಿಂಗದೇವ'ನಿಗೆ ಶರಣಾಗುತ್ತಾರೆ

ಹೀಗಾಗಿ ಅವರ ಸಾಧಕ ಸ್ಥಿತಿಯ ವಿಚಾರಗಳಲ್ಲಿ ಮತ್ತು ಪ್ರೌಢಾವಸ್ಥೆಯ ವಿಚಾರಗಳಲ್ಲಿ ತುಂಬಾ ವ್ಯತ್ಯಾಸವೂ ಕೆಲವೊಮ್ಮೆ ವಿರೋಧಾಭಾಸವೂ ಇದೆ.

ಈ ಕಾರಣಕ್ಕಾಗಿ ವಚನಗಳ ಭಾವಾರ್ಥವನ್ನು ಗುರುತಿಸಿ ಅವುಗಳನ್ನು ಅವರು ಬರೆದ ಕಾಲಾನುಕ್ರಮಕ್ಕೆ(Chronologically)ತಕ್ಕಂತೆ ಜೋಡಣೆ ಮಾಡಿದರೆ ವಚನಕಾರರ ಜೀವನ ಮತ್ತು ಅವರ ಸಂದೇಶಗಳ ಬಗೆಗೆ ಇರುವ ಅನೇಕ ಗೊಂದಲವನ್ನು ನಿವಾರಿಸಲು ಸಾಧ್ಯವಿದೆ. **'ಅಕ್ಕನ ಸಮಗ್ರವಚನಗಳು ಮತ್ತು ಯೋಗಾಂಗ ತ್ರಿವಿಧಿ'** ಗ್ರಂಥದಲ್ಲಿ ನಾನು ಅಕ್ಕನ ಜೀವನ ಕ್ರಮಕ್ಕೆ ತಕ್ಕಂತೆ ಅವರು ವಚನಗಳನ್ನು ಬರೆದಿರುವ ಕ್ರಮದಲ್ಲಿಯೇ ವಿಗಂಡಿಸಿದ್ದೇನೆ. ಇನ್ನು ಗುರು ಬಸವಣ್ಣನವರ ಮತ್ತು ಸಿದ್ದರಾಮೇಶ್ವರ ವಚನಗಳನ್ನು ಅವರ ಜೀವನಕ್ರಮದಲ್ಲಿಯೇ ವಿಂಗಡಿಸಬೇಕಾಗಿದೆ. ಈ ಮೂವರನ್ನು ಬಿಟ್ಟರೆ ಉಳಿದ ವಚನಕಾರರು ನೇರವಾಗಿ ಇಷ್ಟಲಿಂಗ ದೀಕ್ಷೆಯನ್ನು ಹೊಂದಿ ನೇರವಾಗಿ ಲಿಂಗಾಯತ ಧರ್ಮಕ್ಕೆ ಬಂದವರು. ಆದ್ದರಿಂದ ಚೆನ್ನಬಸವಣ್ಣನವರು, ಅಲ್ಲಮಪ್ರಭುದೇವರು, ಮಡಿವಾಳ ಮಾಚಿದೇವರು, ಅಕ್ಕನಾಗಲಾಂಬಿಕೆ, ಹಡಪದ ಅಪ್ಪಣ್ಣ, ಅಂಬಿಗ ಚೌಡಯ್ಯ ಮುಂತಾದವರ ಜೀವನದಲ್ಲಿ ಮತ್ತು ವಚನಗಳಲ್ಲಿ ಶಿವಭಕ್ತಿ ಕಂಡುಬರುವುದಿಲ್ಲ. ಮತ್ತು ಅವರ ವಚನಗಳಲ್ಲಿ ಶಿವನ ವರ್ಣನೆಯಾಗಲೀ ಅವನನ್ನು ದೇವರೆಂದು ಭಾವಿಸಿರುವುದಾಗಲೀ ಕಂಡುಬರುವುದಿಲ್ಲ. ಹಾಗಂತ ವಚನಕಾರಾರೂ ಶಿವನನ್ನು ಅಗೌರವದಿಂದ ಕಂಡಿಲ್ಲ ಶಿವನು ಭಾರತ ದೇಶದ ಭಕ್ತಿ ಪರಂಪರೆಯ ಮೂಲಿಗ. (ಹರನು ಮೂಲಿಗನಾಗಿ ಪುರಾತರೊಳಗಾಗಿ- ಗುರು ಬಸವಣ್ಣನವರು) ಸಾತ್ವಿಕವಾದ ಭಕ್ತಿಯನ್ನು ಮಾಡಕಲಿಸಿದವನು. ವಿಭೂತಿ ರುದ್ರಾಕ್ಷಿಗಳನ್ನು ಕಂಡು ಹಿಡಿದ ಮೂಲ ಪುರುಷ ಎಂದು ಗೌರವಿಸಿ ಗುರುವನ್ನಾಗಿ ಕಂಡಿದ್ದಾರೆ.

■



ಬಾಗಲಕೋಟ ರಾಷ್ಟ್ರೀಯ ಬಸವ ದಳದ ವಾರ್ಷಿಕೋತ್ಸವದಲ್ಲಿ ಸಚಿವರಾದ ಎಸ್. ಆರ್. ಪಾಟೀಲರು, ಜಿ.ಎಸ್. ಪಾಟಿಲರು, ಮತ್ತು ಮಾತೆ ಬಸವಗೀತಾರವರು




ದಿ.30-06-2013 ಬಾಗಲಕೋಟ ರಾಷ್ಟ್ರೀಯ ಬಸವ ದಳದ ವಾರ್ಷಿಕೋತ್ಸವದಲ್ಲಿ ಸಚಿವರಾದ ಎಸ್. ಆರ್. ಪಾಟೀಲರಿಂದ ಭಾಷಣ




ಪೂನಾದ ಅಂಕುಶರಾವ್ ಲಾಂಡಗೆ ಸಭಾಭವನದಲ್ಲಿ ದಿ.27-06-2013 ರಂದು ಪೂಜ್ಯ ಮಾತಾಜಯವರಿಗೆ ಸನ್ಮಾನ



ಪೂನಾದಲ್ಲಿ ಪೂಜ್ಯ ಮಾತಾಜಿಯವರ ಅಭಿನಂದನ ಸಮಾರಂಭ
ಉದ್ಘಾಟನೆ ಬೀದರಿನ ಶಾಸಕ ಅಶೋಕ್ ಖೇಣಿಯವರಿಂದ



ಬೀದರ ಶಾಸಕ ನೈಸ್ ಸಂಸ್ಥೆಯ ಮಹಾನಿರ್ದೇಶಕ ಅಶೋಕ್ ಖೇಣಿ ಅವರಿಗೆ ಸನ್ಮಾನ



ಶರಣ. ಅಶೋಕ ಖೇಣಿ ಅವರ ತಮ್ಮ ಹಾಗೂ ಪುಣೆಯ
ಪ್ರಸಿದ್ಧ ಉದ್ಯಮಿ ಧರ್ಮರಾಜ್ ಖೇಣಿಯವರಿಗೆ ಸನ್ಮಾನ

Registerd NO/KA/BGW/50/2012-2014, RNI 19980/70, POSTED AT MBC BANGALORE GPO ON 3rd,10th,20th, OF EVERY MONTH. LICENCED TO POST WITHOUT PRE PAYMENT WPP-17, PAGES 32+4 (COVER PAGES)